ಕಲ್ಯಾಣ ಕಿರಣ

ಜ್ಞಾನದ ಬಲದಿಂದ ಅಜ್ಞಾನದ ಕೇಡು

ಮೇ-2014
ಬೆಲೆ: 20/-











ಪೂಜ್ಯ ಡಾ॥ ಮಾತಾಜಿಯರಿಗೆ ಅವರ ಹುಟ್ಟೂರಾದ ಚಿತ್ರದುರ್ಗ ಜಿ॥ ಸಾಸಲಹಟ್ಟಿಯಲ್ಲಿ ನಡೆದ ಅಭಿನಂದನಾ ಸಮಾರಂಭದ ಉದ್ಘಾಟನೆ



ಅಭಿನಂದನಾ ಸಮಾರಂಭದಲ್ಲಿ ಕುಮಾರಿ ನಿಸರ್ಗಾಳಿಂದ ವಚನಾಭಿನಯ



ಅಧ್ಯಾತ್ಮ ಕ್ರಾಂತಿವೀರ

ಕಾರ್ತಿಕದ ಕತ್ತಲಲಿ ಆಕಾಶ ದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ,
ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ,
ದೇವದಯೆಯೊಂದು ಹೇ ಧೀರಾವತಾರ,
ಶ್ರೀ ಬಸವೇಶ್ವರಾ!

ಜಾತಿ ಪದ್ಧತಿಯ ಹೋಮ ಕೂಪಕ್ಕೆ
ಬಿದ್ದು, ವೈದಿಕರ ಯಜ್ಞ ತಾಪಕ್ಕೆ
ಬಲಿವೋದ ದಲಿತ ಜೀವರನೆತ್ತಿ ಮತಿವಿಚಾರಕ್ಕೆ
ಕಾಯಕದ ದಿವ್ಯ ತತ್ವದ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ।

ಇಂದಿಗೂ ನಾವು ನಿನ್ನೆತ್ತರಕೆ ಏಳಲಾರದೆ ಅಯ್ಯೋ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯಾ।
ಬಾರಯ್ಯ, ಕೈಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ ಕುಂಡದಿಂದೆ;
ಭಕ್ತಿ ಗಂಗೆಯನೆರೆದು
ಭಾಗವತ ಶಕ್ತಿಯಿಂ ಕರೆದು
ಮತ ಮೌಢ್ಯದಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನವೇದಾಂತ ತೀರ್ಥದಿಂದ।

– ರಾಷ್ಟ್ರಕವಿ ಕುವೆಂಪು

ಅಯ್ಯಾ, ನಿಮ್ಮ ಶರಣರ ಬರುವಿಂಗೆ ಗುಡಿತೋರಣವ ಕಟ್ಟುವೆ
ಅಯ್ಯಾ ನಿಮ್ಮ ಶರಣರ ಬರುವಿಂಗೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ
ಅಯ್ಯಾ ನಿಮ್ಮ ಶರಣರೆನ್ನ ಮನೆಗೆ ಬಂದಡೆ
ಅವರ ಶ್ರೀಪಾದವೆನ್ನ ಹೃದಯದಲ್ಲಿ ಬಗೆದಿಟ್ಟುಕೊಂಬೆ ಕಾಣಾ
ಚೆನ್ನಮಲ್ಲಿಕಾರ್ಜುನ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-45
ಸಂಚಿಕೆ-05

ಬಸವ ಶಕೆ -881
ಮೇ-2014

ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಹಬ್ಬ - ಹುಣ್ಣಿಮೆ-ಉತ್ಸವಗಳು

* ಧಾರವಾಡದಲ್ಲಿ ಶರಣೋತ್ಸವ – ಮೇ 23, 24, 25
* ಬಸವ ಗಂಗೋತ್ರಿಯಲ್ಲಿ ಬಸವೋತ್ಸವ – ಜೂನ್ 22
* ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ – ಜೂನ್ 30
* ಬಸವ ಲಿಂಗೈಕ್ಯ ಸಂಸ್ಮರಣೆ (ಬಸವ ಪಂಚಮಿ) – ಆಗಸ್ಟ್ 01
* ನೀಲಾಂಬಿಕಾ ಲಿಂಗೈಕ್ಯ ಸಂಸ್ಮರಣೆ – ಆಗಸ್ಟ್ 02

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್ ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಧಾರವಾಡ ನಗರದ ಉಳವಿ ರಸ್ತೆಯಲ್ಲಿರುವ
ಜಗನ್ಮಾತಾ ಅಕ್ಕಮಹಾದೇವಿ ಮಠದ
46ನೇ ವಾರ್ಷಿಕೋತ್ಸವ ಮತ್ತು
ಐದನೆಯ

ಶರಣೋತ್ಸವ











ಸ್ಥಳ:
ದಿ.23 ಮತ್ತು 24ರಂದು ಧಾರವಾಡದ ಕರ್ನಾಟಕ
ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಭವನದಲ್ಲಿ
ದಿ.25ರಂದು ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣು ಬನ್ನಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್
ಉಳವಿ ರಸ್ತೆ ಧಾರವಾಡ ಸಂಸ್ಥೆಯಿಂದ



ಐದನೆಯ
ಶರಣೋತ್ಸವ ಕಾರ್ಯಕ್ರಮ

2014, ಮೇ 23, 24 ಮತ್ತು 25 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥಸಂಸ್ಥೆಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟರು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನುಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ -ಪ್ರವಚನದ ನಂತರ ಪ್ರಸಾದ ದಾಸೋಹ ಇರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನುಅನುಸರಿಸಲೋಸುಗ ಅನಾಥಾಲಯವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಮಹಾಜಗದ್ಗುರು ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು , ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3ದಿವಸಗಳ ಕಾಲ ಹಮ್ಮಿಕೊಳ್ಳ ಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. 2014ರ ಮೇ ದಿ.23 ಮತ್ತು 24ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಭವನದಲ್ಲಿ ಶುಕ್ರ(ಮಾತೃ)ವಾರ ದಿ.23-5-2014ರಂದು ಬೆಳಿಗ್ಗೆ 10-30ರಿಂದ ಉದ್ಘಾಟನೆ, ಮಧ್ಯಾಹ್ನ 3-30ರಿಂದ ಧರ್ಮಚಿಂತನಗೋಷ್ಠಿ. ಸಂಜೆ 6ರಿಂದ ಸಾಂಸ್ಕೃತಿಕ ಕಾರ್ಯಕ್ರಮ ವಚನಾಭಿನಯ. ದಿ24-5-2014ರಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ-ಸಾಂವಿಧಾನಿಕ ಮಾನ್ಯತೆ ಕುರಿತು ಚಿಂತನೆ, 3-30ರಿಂದ 5ರವರೆಗೆ ಧರ್ಮಚಿಂತನಗೋಷ್ಠಿ.-2 ನಂತರ 5ರಿಂದ ಮೆರವಣಿಗೆ. ದಿ. 25 -5-2014ರಂದು ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಪೀಠಾರೋಹಣ, ಸಮಾರೋಪ ಸಮಾರಂಭ ಬೆಳಗ್ಗೆ 10-30ರಿಂದ.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಮೂರು(3) ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	150ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ. ಸಿದ್ಧಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ಡಿ.ಬಿ.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ

ಶರಣ. ಶಿವಕುಮಾರ ಕಟಗಿ
ಸಂಘಟಕರು, ರಾಷ್ಟ್ರೀಯ ಬಸವ ದಳ, ಧಾರವಾಡ

ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ,ಧಾರವಾಡ

ಶರಣ. ಲಿಂಗರಾಜ ಇಂಗಳಳ್ಳಿ
ರಾ.ಬ.ದಳ, ಹುಬ್ಬಳ್ಳಿ

ಶರಣ. ಅಶೋಕ ಶೀಲವಂತರು
ರಾ.ಬ.ದಳ, ಕಲಘಟಗಿ

ಶರಣ. ಸೂರ್ಯಕಾಂತ ಶೀಲವಂತರ
ರಾ.ಬ.ದಳ, ಹುಬ್ಬಳ್ಳಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003, ದೂ: 0836-3204121

ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ

ಶರಣ. ಎಸ್.ಬಿ. ಜೋಡಳ್ಳಿ
ಉಪಾಧ್ಯಕ್ಷರು, ಧಾರವಾಡ-ಬೆಳಗಾವಿ ಲಿಂ.ಧ.ಮ

ಶರಣ. ಬಿ.ಜಿ. ಹೊಸಗೌಡರು
ಗಣನಾಯಕರು, ಹುಬ್ಬಳ್ಳಿ

ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828

ಶರಣ. ಉಮೇಶ್ ಕಟ್ಟಿಮನಿ
ರಾ.ಬ.ದಳ, ಹುಬ್ಬಳ್ಳಿ

ಶರಣ. ವಿನಯ ಪರಮಾದಿ ರಾ.ಬ.ದಳ, ಹುಬ್ಬಳ್ಳಿ

ಬಸವ (ಲಿಂಗಾಯತ) ಧರ್ಮದ ಷಟ್ ಸೂತ್ರಗಳು

1. ಧರ್ಮ ಸ್ಥಾಪಕರು - ವಿಶ್ವ ಗುರು ಬಸವಣ್ಣನವರು
2. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮದ ದೇವರ ಹೆಸರು - ಲಿಂಗದೇವ
4. ಧರ್ಮ ಲಾಂಛನ - ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ
5. ಧರ್ಮ ಕ್ಷೇತ್ರ - ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ ಹಾಗೂ ಶರಣ ಭೂಮಿ ಬಸವ ಕಲ್ಯಾಣ
6. ಧರ್ಮದ ಧ್ಯೇಯ -ಜಾತಿ ವರ್ಣ ವರ್ಗರಹಿತ,ಧರ್ಮಸಹಿತ, ಶರಣ ಸಮಾಜ (ಕಲ್ಯಾಣ ರಾಜ್ಯ) ನಿರ್ಮಾಣ

ಅಕ್ಕನ ಅಮರವಾಣಿ

- ಮಾತಾಜಿ

ಭಾಗ-3

46. ಬರುವಿನ ನಿರೀಕ್ಷೆಯಲ್ಲಿ

ಉದಯದಲೆದ್ದು ನಿಮ್ಮ ನೆನೆವೆನಯ್ಯಾ.
ಕಸದೆಗೆದು ಚಳೆಯ ಕೊಟ್ಟು
ನಿಮ್ಮ ಬರುವ ಹಾರುತಿರ್ದೆನಯ್ಯಾ.
ಹಸೆಹಂದರವನಿಕ್ಕಿ ನಿಮ್ಮಡಿಗಳಿಗೆಡೆಮಾಡಿಗೊಂಡಿರ್ದೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನೀನಾವಾಗ ಬಂದೆಯಾ ಎನ್ನ ದೇವಾ?

ಅಂದು ಬಂದಾನು ಇಂದು ಬಂದಾನು ಎಂಬ ನಿರೀಕ್ಷೆಯಲ್ಲಿರುವ ಮಹಾದೇವಿಯಕ್ಕನವರು ಮನೆಯ ಪರಿಸರ ಸ್ವಚ್ಛವಾಗಿಲ್ಲದಿದ್ದರೆ ಶಿವನು ಬರಲಿಕ್ಕಿಲ್ಲ ಎಂದು ಬೆಳಗಿನ ಜಾವದಲ್ಲಿ ಎದ್ದು ಅಂಗಳದ ಕಸ ಗುಡಿಸುವರು. ಧೂಳು ಏಳಬಾರದೆಂದು ನೀರನ್ನು ಚಿಮುಕಿಸಿ ಚಳೆ ಕೊಡುವರು; ಬಾಗಿಲಲ್ಲಿ ಕಾಯ್ದುಕೊಂಡಿರುವರು.

ಬಂದಾಗ ಪಾದಪೂಜೆ ಮಾಡಲೆಂದು ಹಸೆ ಮಣೆ ಇಟ್ಟಿರುವರು. ಮನೆಯ ಮುಂದೆ ನೆರಳಿರಲಿ ಎಂದು ಹಂದರ (ಚಪ್ಪರ)ವ ಹಾಕಿಸುವರು. ಬಾಗಿಲಿಗೆ ತೋರಣವನ್ನು ಕಟ್ಟುವರು. ತಮ್ಮನ್ನೇ ತಾವು ಅರ್ಪಿಸಿಕೊಂಡಿರುವರು. ಇಷ್ಟೆಲ್ಲ ಸಿದ್ಧತೆ ಮಾಡಿಕೊಂಡು ಚನ್ನ ಮಲ್ಲಿಕಾರ್ಜುನಯ್ಯ ನೀನಾವಾಗ ಬಂದೆಯಾ ದೇವಾ ಎಂದು ಹಂಬಲಿಸುವರು.

47. ಜಕ್ಕವಕ್ಕಿಯ ಪ್ರೇಮ

ಬಂದಿಹನೆಂದು ಬಟ್ಟೆಯ ನೋಡಿ,
ಬಾರದಿದ್ದಡೆ ಕರಗಿ ಕೊರಗಿದೆನವ್ವಾ.
ತಡವಾದಡೆ ಬಡವಾದೆ ತಾಯೆ.
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತೆಕ್ಕೆಸಡಲಿದ ಜಕ್ಕವಕ್ಕಿಯಂತಾದೆನವ್ವಾ.

ಇಡೀ ದಿವಸ ಚನ್ನಮಲ್ಲಿಕಾರ್ಜನ (ಶಿವ)ನಿಗಾಗಿ ಕಾಯ್ದು, ದಿನ ಕಳೆದರೂ ದರ್ಶನ ವಾಗದಿದ್ದಾಗ ಅಕ್ಕನವರು ಕರಗಿ ಹೋಗುತ್ತಿದ್ದಾರೆ; ಕೊರಗುತ್ತಿದ್ದಾರೆ. ಇದೇ ಚಿಂತೆಯಲ್ಲಿ ಸೊರಗಿ ಹೋಗಿದ್ದಾರೆ. ಇರುಳಿಡೀ ಅವನದೆ ಧ್ಯಾನ. ಒಂದು ವೇಳೆ ಅವನ ನೆನಹು ಇಲ್ಲವಾದಡೆ ತೆಕ್ಕೆ ಸಡಲಿದ ಜಕ್ಕವಕ್ಕಿಯಂತೆ ಪ್ರಾಣವೇ ಹೋದಂತೆ ಆಗಿಬಿಡುತ್ತದೆ.

ಜಕ್ಕವಕ್ಕಿ ಗಂಡು -ಹೆಣ್ಣು ಪಕ್ಷಿಗಳು ಸದಾ ಜೊತೆಗೂಡಿಯೇ ಇರುತ್ತವಂತೆ. ಅದರಲ್ಲಿ ಒಂದು ಏನಾದರೂ ಅವಗಡಕ್ಕೆ ಒಳಗಾದರೆ ಇನ್ನೊಂದು ಪಕ್ಷಿಯು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಂತೆ. ಅಕ್ಕನವರು ಜಕ್ಕವಕ್ಕಿಯ ಉದಾಹರಣೆ ಕೊಟ್ಟು ತಾವು ಚನ್ನ ಮಲ್ಲಿಕಾರ್ಜುನನ ನೆನಹಿನ ಹೊರತು ಬದುಕಲೇ ಆರೆ ಎಂದು ಹೇಳುತ್ತಾರೆ. ಪ್ರಕೃತಿ, ಪಕ್ಷಿ, ಗಿಡ ಮರ ಹೂವುಗಳ ಬಗ್ಗೆ ಅಕ್ಕನವರಿಗೆ ಎಷ್ಟೊಂದು ಪರಿಜ್ಞಾನವಿತ್ತು ಎಂಬುದು ಈ ವಚನದಿಂದ ತಿಳಿಯುತ್ತದೆ.

48. ಶಿವನಿಗಾಗಿ ಅಲಂಕಾರ

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ದೇವಾಂಗವನುಟ್ಟೆನೆಲೆ ಪುರುಷ ಬಾರಾ,
ಪುರುಷ ರತ್ನವೆ ಬಾರಾ.
ನಿನ್ನ ಬರವೆನ್ನ ಅಸುವಿನ ಬರವಾದುದೀಗ,
ಬಾರಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ,
ನೀನು ಬಂದೆಹೆನೆಂದು ಬಟ್ಟೆಯ ನೋಡಿ ಬಾಯಾರುತಿರ್ದೆನು.

ಸಾಮಾನ್ಯವಾಗಿ ದೇವರ ಹಂಬಲದಲ್ಲಿರುವ ಸಾಧಕರು ದೇಹಪೋಷಣೆಗೆ ಅಷ್ಟಾಗಿ ಗಮನ ಕೊಡರು. ತಲೆ ಬಾಚುವುದರಲ್ಲಿ ಆಸಕ್ತಿ ಇರುವುದಿಲ್ಲ. ಅಲಂಕರಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ. ಅಕ್ಕನವರು ಈ ರೀತಿ ನಿರಾಸಕ್ತರಾಗಿರುವಾಗ ಮನನೊಂದ ತಾಯಿ ಹೇಳುವರು. "ಹರೆಯದ ಹುಡುಗಿ ಈ ರೀತಿ ಅಜ್ಜಿಯಂತಿದ್ದರೆ ಯಾರಿಗೆ ತಾನೇ ಇಷ್ಟವಾಗುವುದು?" ಎಂದು. ಆಗ ಭಾವೋದ್ವೇಗಕ್ಕೆ ಒಳಗಾಗಿರುವ ಅಕ್ಕನವರು ಆಲೋಚಿಸುವರು, "ನಾನು ಹೀಗೆ ಅಸ್ತವ್ಯಸ್ತವಾಗಿ ಇರುವುದರಿಂದಲೇ ಚನ್ನಮಲ್ಲಿಕಾರ್ಜುನ ನನ್ನ ಬಗ್ಗೆ ಉದಾಸೀನ ತಾಳಿರಬೇಕು. ಆದ್ದರಿಂದ ನಾನು ಚೆನ್ನಾಗಿ ಇರಬೇಕು." ಎಂದುಕೊಳ್ಳುವರು. ಎಂದಿಲ್ಲದ ಆಸಕ್ತಿಯಿಂದ ಅರಿಷಿಣ-ಎಣ್ಣೆಯನ್ನು ಮೈಗೆ ಹಚ್ಚಿಕೊಂಡು ಸ್ನಾನ ಮಾಡುವರು. ಬಿಚ್ಚಿಟ್ಟಿದ್ದ ಬಂಗಾರದ ಆಭರಣಗಳನ್ನು ಧರಿಸುವರು. ಪೆಟ್ಟಿಗೆಯಲ್ಲಿದ್ದ ರೇಷ್ಮೆ ಸೀರೆಯನ್ನು ಉಟ್ಟು, "ಅಲಂಕರಿಸಿಕೊಂಡಿದ್ದೇನೆ. ಪುರುಷ ಬಾರಾ; ನೀನು ಪುರುಷ ರತ್ನ. ನಿನ್ನ ಬರುವು ಎನ್ನ ಪ್ರಾಣದ ಬರುವು. ದೇವಾ, ನೀನು ಬರುವಿ ಎಂದು ದಾರಿಯನ್ನು ಕಾಯ್ದು ಬಾಯಾರುತ್ತಿರುವೆನು." ಎಂದು ಹಂಬಲಿಸುತ್ತಾರೆ.

49. ಗೆಳತಿಯರಿಗೆ ಆಹ್ವಾನ

ಇಂದೆನ್ನ ಮನೆಗೆ ಗಂಡ ಬಂದಹನೆಲೆಗವ್ವಾ.
ನಿಮನಿಮಗೆಲ್ಲ ಶೃಂಗಾರವ ಮಾಡಿಕೊಳ್ಳಿ.
ಚೆನ್ನಮಲ್ಲಿಕಾರ್ಜುನನೀಗಳೆ ಬಂದಹನು,
ಇದಿರುಗೊಳ್ಳ ಬನ್ನಿರವ್ವಾಗಳಿರಾ.

ಅಕ್ಕನವರು ಹರನ ಹಂಬಲದಲ್ಲಿ ಭಾವಾತಿರೇಕಕ್ಕೆ ಒಳಗಾಗಿದ್ದಾರೆ. ಒಂದು ದಿನ ಬೆಳಿಗ್ಗೆ ಗೆಳತಿಯರಿಗೆ ಹೇಳುತ್ತಾರೆ, "ಇಂದು ಖಂಡಿತವಾಗಿಯೂ ನನ್ನ ದೇವನು ಬರುತ್ತಾನೆ. ನೀವೆಲ್ಲರೂ ಚೆನ್ನಾಗಿ ಅಲಂಕರಿಸಿಕೊಂಡು ಸ್ವಾಗತ ಮಾಡುವಿರಂತೆ. ಶೃಂಗರಿಸಿಕೊಂಡು ಸಿದ್ಧರಾಗಿರಿ, ಚನ್ನಮಲ್ಲಿಕಾರ್ಜುನನನ್ನು ಇದಿರ್ಗೊಳ್ಳಲು ಬನ್ನಿರಿ," ಎಂದು.

50. ಮಾನಸಿಕ ಕ್ಷೋಭೆ

ಬಲ್ಲಿದ ಹಗೆಯವ ತೆಗೆವನ್ನಬರ,
ಬಡವರ ಹರಣ ಹಾರಿಹೋದ ತೆರನಂತಾಯಿತ್ತು.
ನೀ ಕಾಡಿ ನೋಡುವನ್ನಬರ.
ಎನಗಿದು ವಿಧಿಯೇ ಹೇಳಾ ತಂದೆ?
ಮೂರುವಾರುವನ್ನಬರ,

ಎಮ್ಮೆ ಗಾಳಿಗೆ ಹಾರಿಹೋದ ತೆರನಂತಾಯಿತ್ತಯ್ಯಾ.
ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯಾ
ಚೆನ್ನಮಲ್ಲಿಕಾರ್ಜುನಾ?

ಹಿಂದಿನ ಕಾಲದಲ್ಲಿ ಬೆಳೆದ ಧಾನ್ಯಗಳನ್ನು ಕ್ರಿಮಿ, ಕೀಟಗಳಿಂದ ಕಳ್ಳಕಾಕರಿಂದ ರಕ್ಷಿಸಿಡಲು ಆಳಾವಾದ ತಗ್ಗುಗಳನ್ನು ತೋಡುತ್ತಿದ್ದರು. ಅವುಗಳಿಗೆ 'ಹಗೇವು' ಎಂದು ಕರೆಯುತ್ತಿದ್ದರು. ಯಾವಾಗಲಾದರೊಮ್ಮೆ ಹಗೇವನ್ನು ತೆಗೆದು ದವಸ ಧಾನ್ಯಗಳನ್ನು ಹೊರತೆಗೆದು ಬಿದಿರಿನ ಕಣಜದಲ್ಲಿ ತುಂಬಿಡುತ್ತಿದ್ದರು. ಬಡವರು ದುಡಿದು ಅಂದಂದು (ಅಥವಾ ವಾರಕ್ಕೊಮ್ಮೆ) ಕೂಲಿಗಾಗಿ ಕಾಳನ್ನು ಪಡೆದು ಜೀವನ ಸಾಗಿಸುವರು. ಹೀಗಿದ್ದಾಗ ಬಡವನು ದುಡಿಮೆಯ ಕೂಲಿ ಕೇಳಿದಾಗ ಶ್ರೀಮಂತನು "ನನ್ನ ಹಗೇವು ತೆಗೆದ ದಿನ ನಿನ್ನ ಕೂಲಿಯ ಕಾಳು ಕೊಡುತ್ತೇನೆ." ಎಂದರೆ ಬಡವನು ಆವರೆಗೆ ಪ್ರಾಣ ಇಟ್ಟುಕೊಂಡಿರಲು ಸಾಧ್ಯವೆ? ಸಿರಿವಂತನಂತೆ ನೀನು ನನ್ನನ್ನು ಕಾಡುತ್ತಲಿರುವೆ. ಒಂದು ದಿನ ನೀನು ಒಲಿದೇ ಒಲಿಯುತ್ತೀಯೆ. ಆದರೆ ಅಲ್ಲಿಯವರೆಗೆ ಮಾನಸಿಕ ವೇದನೆ ತಡೆದುಕೊಳ್ಳುವುದು ಹೇಗೆ? ಚನ್ನಮಲ್ಲಿಕಾರ್ಜುನಾ, ನನಗೆ ನೀನು ಯಾವ ಪರಿಯಲ್ಲಿ ಕರುಣಿಸುವೆ ಎಂಬುದು ತಿಳಿಯದಾಗಿದೆ.

51. ಸಗುಣ ಸಾಕ್ಷಾತ್ಕಾರ

ಹೊಳೆವ ಕೆಂಜೆಡೆಗಳ, ಮಣಿಮುಕುಟದ, ಒಪ್ಪುವ ಸುಲಿಪಲ್ಗಳ,
ನಗೆಮೊಗದ, ಕಂಗಳ ಕಾಂತಿಯ,
ಈರೇಳುಭುವನವ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು.
ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ.
ಗಂಡಗಂಡರೆಲ್ಲರ ಹೆಂಡಿರಾಗಿ ಆಳುವ ಗೊರವನ ಕಂಡೆ ನಾನು.
ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ
ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

ಭಾವೋದ್ವಿಗ್ನತೆ ತುಟ್ಟ ತುದಿಯನ್ನು ತಲ್ಪಿದಾಗ ಸಾಧಕರಿಗೆ ಸಗುಣ ಸಾಕ್ಷಾತ್ಕಾರವಾಗುವುದು ಅಕ್ಕನವರು ಬಹುಕಾಲದಿಂದ ಹಂಬಲಿಸುತ್ತಿದ್ದ ಚನ್ನಮಲ್ಲಿಕಾರ್ಜನ ಇದೀಗ ಎದುರು ನಿಂತಿದ್ದಾನೆ. ಎತ್ತಿ ಕಟ್ಟಿದ ಜಡೆ ಸೂರ್ಯನ ಕಿರಣದಲ್ಲಿ ಮಿಂಚುತ್ತಿದೆ. ಆ ಜಡೆಗೆ ರುದ್ರಾಕ್ಷಿಯ ಮಣಿಯನ್ನು ಸುತ್ತಿದ್ದಾನೆ. ನಸು ನಗುತ್ತಿರುವ ಮೂರ್ತಿಯ ಹಲ್ಲುಗಳು ಹೊಳೆಯುತ್ತಿವೆ, ಕಣ್ಣುಗಳು ತೇಜಸ್ಸಿನಿಂದ ಮಿಂಚುತ್ತಿವೆ. ಹದಿನಾಲ್ಕು ಲೋಕಗಳನ್ನು ಬೆಳಗುವ ದಿವ್ಯ ಸ್ವರೂಪನು ಎದುರಲ್ಲಿ ನಿಂತಿದ್ದಾನೆ. ನೋಡಿ ನೋಡಿ ಕಣ್ಣುಗಳ ಬರ ಹಿಂಗಿ ಹೋಗುತ್ತಿದೆ. ಈ ಜಗತ್ತಿನ ಗಂಡರಿಗೆಲ್ಲ ಗಂಡನಾಗಿ ಆಳುವ ಗೊರವನ ಅಕ್ಕನವರು ಕಂಡು ಹರ್ಷಪುಳಕಿತರಾಗಿದ್ದಾರೆ. ಜಗತ್ತಿನ ಸಚೇತಕ ಶಕ್ತಿಯಾಗಿ ಅದರ ಮೂಲಕ ಮಾತನಾಡುವ ಪರಮಗುರು ಚನ್ನಮಲ್ಲಿಕಾರ್ಜುನನ ನಿಲುವು ಕಂಡು ಧನ್ಯಳಾದೆನೆಂದು ಅಕ್ಕನವರು ಹೇಳುತ್ತಾರೆ.

52. ಆನಂದಾನುಭೂತಿ

ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ.
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವಾ.
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವಾ.

ಚೆನ್ನಮಲ್ಲಿಕಾರ್ಜುನದೇವರ ದೇವನ ಕೂಡುವ ಕೂಟವ
ನಾನೇನೆಂದರಿಯದೆ ಮರೆದೆ ಕಾಣವ್ವಾ

ಪೂಜೆಗೆ ಕುಳಿತು ಅಕ್ಕನವರು ಶಿವನ ದರ್ಶನ ಪಡೆದು ಸಂಭ್ರಾಂತರಾಗಿದ್ದಾರೆ. ಬಹು ಕಾಲದ ಕನಸು ನನಸಾಗಿದೆ. ಆನಂದಾತಿರೇಕದಿಂದ ಕಣ್ಣುಗಳಲ್ಲಿ ಶಿವನ ರೂಪವನ್ನು ತುಂಬಿ ಕೊಳ್ಳುವಂತೆ ನೋಡುತ್ತಾ ಹಾಗೆಯೇ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದಾರೆ. ನೊಂದು ನಲುಗಿರುವ ಅಕ್ಕನವರನ್ನು ಶಿವನು ಸಂತೈಸುವ ಮಾತುಗಳನ್ನು ಕೇಳುತ್ತ ಕೇಳುತ್ತ ಆನಂದಾನುಭೂತಿಯಲ್ಲಿ ಒರಗುತ್ತಿದ್ದಾರೆ. ನೆಲದ ಮೇಲೆ ಏನೂ ಹಾಸಿಲ್ಲವಾದರೂ ಅದರ ಪರಿವೆ ಇಲ್ಲ. ಅಪಾರವಾದ ಸಾಮರಸ್ಯದ ಆನಂದ ಪ್ರಾಪ್ತಿಯಾಗಿ ಬಹಿರಂಗದ ಪ್ರಜ್ಞೆಯನ್ನು ಅಕ್ಕನವರು ಕಳೆದುಕೊಂಡಿದ್ದಾರೆ.

ಸಗುಣ ಸಾಕ್ಷಾತ್ಕಾರದ ಈ ಅನುಭವ ಬಹಳ ವಿಶೇಷವಾದುದು. ಹರನಿಗಾಗಿ ಹಂಬಲಿಸುವ ಒಂದು ವಿಶೇಷ ಸ್ಥಿತಿ ಪ್ರಾಪ್ತವಾಗುತ್ತದೆ. ಅದನ್ನು ಅನುಭವಿಸಿದ ನಾನು ನನ್ನ ಮನೋ ವೇದನೆಯನ್ನು ಮಾತೃವಾಣಿ, ವಿರಹ ತರಂಗ ಎಂಬ ಎರಡು ಕೃತಿಗಳಲ್ಲಿ ಬಿನ್ನವಿಸಿದ್ದೇನೆ. ಒಂದು ಮಾನಸಿಕ ಉತ್ಕಟ ಸ್ಥಿತಿ ಅದು. ಆಗ ನನಗೆ ಸಗುಣ ಸಾಕ್ಷಾತ್ಕಾರದ ಅನುಭವವಾಗಿ ಶಿವ ಮತ್ತು ಅಕ್ಕಮಹಾದೇವಿ ದರ್ಶನ ಕೊಟ್ಟು ಅನುಗ್ರಹಿಸಿದರು. ಹಾಗೆ ಅನುಭವವಾದ ನಂತರ ಬಹಿರಂಗದ ಪ್ರಜ್ಞೆಯೇ ಇಲ್ಲದ ಸ್ಥಿತಿ ನಮಗೆ ಪ್ರಾಪ್ತವಾಗಿ ಎಷ್ಟೋ ಹೊತ್ತು ಅದರಲ್ಲೇ ಇರುವಂತಾಗುತ್ತದೆ.

53. ದೇವ ವಿರಹ

ಹಿಡಿವೆನೆಂದಡೆ ಹಿಡಿಗೆ ಬಾರನವ್ವಾ.
ತಡೆವೆನೆಂದಡೆ ಮೀರಿ ಹೋಹನವ್ವಾ.
ಒಪ್ಪಚ್ಚಿ ಅಗಲಿದಡೆ ಕಳವಳಗೊಂಡೆ.
ಚೆನ್ನಮಲ್ಲಿಕಾರ್ಜುನನ ಕಾಣದೆ
ಆನಾರಂದರಿಯೆ ಕೇಳಾ, ತಾಯೆ.

ಒಮ್ಮೆ ಸಗುಣ ಸಾಕ್ಷಾತ್ಕಾರವಾದ ಬಳಿಕ ಸಾಧಕನಿಗೆ ಪುನಃ ಪುನಃ ಅದನ್ನು ಪಡೆಯುವ ಆಸೆ ಮೊಳೆದೋರುತ್ತದೆ. ಸಗುಣ ಸಾಕ್ಷಾತ್ಕಾರದಲ್ಲಿ ರೂಪವು ಕಾಣುತ್ತದೆ, ಅದರ ಮಾತು ಕೇಳುತ್ತದೆ. (Audio Visual form). ಆದರೆ ಭೌತಿಕ ಕೈಗಳಿಂದ ಹಿಡಿಯಬೇಕೆಂದರೆ ಸಾಧ್ಯವಾಗದು, ಏಕೆಂದರೆ ಅದಕ್ಕೆ ಸ್ಥೂಲ ಶರೀರ ಇರುವುದಿಲ್ಲ. ತಡೆದು ನಿಲ್ಲಿಸಬೇಕೆಂದರೆ ಅದು ಮಾಯಾವಾಗುವುದು. ಈ ರೂಪ ಕಣ್ಮರೆಯಾಗುತ್ತಲೇ ಸಾಧಕನಿಗೆ ಪುನಃ ಕಳವಳ ವಾಗುವುದು. ಚನ್ನಮಲ್ಲಿಕಾರ್ಜುನನ ಕಾಣದೆ ನಾನು ಯಾರು? ಎಂಬ ಅರಿವು ನನಗೆ ಉಂಟಾಗದು.

54. ಸಾಮರಸ್ಯದ ಅನುಭವ

ಲೇಸು ಹಾಸು, ನೋಟವಾಭರಣ, ಆಲಿಂಗನ ವಸ್ತು,
ಚುಂಬನವಾರೋಗಣೆ, ಲಲ್ಲೆವಾತು ತಾಂಬೂಲ,
ಲವಲವಿಕೆಯೆ ಅನುಲೇಪನವೆನಗೆ.
ಚೆನ್ನಮಲ್ಲಿಕಾರ್ಜುನನ ಕೂಟ ಪರಮಸುಖವವ್ವಾ.

ಒಳ್ಳೆಯ ಭಾವನೆಯೇ ನೆಲದ ಮೇಲೆ ಹಾಸುವ ಆಸನ; ದೃಷ್ಟಿಯಾರೆ ಇಷ್ಟಲಿಂಗವನ್ನು ನೋಡುವುದೇ ಆಭರಣ, ದೇವನನ್ನು ಮಾನಸಿಕವಾಗಿ ಆಲಂಗಿಸಿಕೊಳ್ಳುವುದೇ ಜೀವೈಕ್ಯ ಇಷ್ಟಲಿಂಗವನ್ನು ಪ್ರೀತಿಯಿಂದ ಮುದ್ದಿಸುವುದೇ ಆರೋಗಣೆ, ದೇವರೊಡನೆ ಮಧುರವಾದ ಮಾತುಗಳನ್ನು ಆಡುವುದು, ಸಂಭಾಷಿಸುವುದೇ ತಾಂಬೂಲ. ಪೂಜೆಯಲ್ಲಿ ಇರುವ ನಿರಂತರ ಉತ್ಸಾಹ (ಲವಲವಿಕೆ)ವೇ ಸುಗಂಧ ದ್ರವ್ಯದ ಅನುಲೇಪನ. ಹೀಗೆ ದೇವನೊಡನೆ ಕೂಟ ಪರಮ ಸುಖದ ಅನುಭವ ನೀಡುತ್ತದೆ.

ಗುರು ಬಸವಣ್ಣನವರು ಹೇಳುತ್ತಾರೆ, "ಮನದಲ್ಲಿ ಮಾತನಾಡುತ್ತಿದ್ದೆನಯ್ಯ, ಜೇನಮಳೆಗಳು ಸುರಿದವು, ಅಮೃತ ಕಳೆಗಳು ಹರಿದವು. ಲಿಂಗದೇವನೆಂಬ ರಸ ಸಾಗರದೊಳಗೆ ಓಲಾಡುತ್ತಿರ್ದೆನಯ್ಯ." ಇಷ್ಟಲಿಂಗವನ್ನು ಶರಣ ಸಾಧಕರು ಒಂದು ಜಡವಸ್ತುವೆಂದು ತಿಳಿಯದೆ ಅದನ್ನು ಚೈತನ್ಯವೆಂದು ಭಾವಿಸಿ, ಅದರೊಡನೆ ಸಂಭಾಷಿಸುವರು.

55. ಮುಕ್ಕಣ್ಣನ ಗೆಲಿದರು

ನಂದಿ ದೇವಂಗೆ, ಖಳ ಸಿರಿಯಾಳಂಗೆ,
ಲಿಂಗ ದಾಸಿಮಯ್ಯಂಗೆ, ಜಾಗರ-ಬಸವಣ್ಣಂಗೆ,
ಆದರಿಕೆಯ ಬಿಟ್ಟು ಜೂಜನಾಡರೆ ನಮ್ಮವರಂದು?
ಒಬ್ಬಂಗೆ ಮಗನ ರಪಣ, ಒಬ್ಬಂಗೆ ಸೀರೆಯ ರಪಣ,
ಒಬ್ಬಂಗೆ ತನು ಮನ ಧನದ ರಪಣ.
ಮೂವರೂ ಮೂದಲಿಸಿ ಮುಕ್ಕಣ್ಣನ ಗೆಲಿದರು.
ಎನ್ನ-ದೇವ ಚೆನ್ನಮಲ್ಲಿಕಾರ್ಜುನಾ.

ಈ ವಚನ ಅರ್ಥವಾಗುತ್ತಲಿಲ್ಲ.

56. ಏಕದೇವನಿಷ್ಠೆ

ಕಾಯ ಮೀಸಲಾಗಿ ನಿನಗರ್ಪಿತವಾಯಿತ್ತು.
ಕರಣ ಮೀಸಲಾಗಿ ನಿನಗರ್ಪಿತವಾಯಿತ್ತು.
ಆನೊಂದರಿಯೆನಯ್ಯಾ
ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ
ಪ್ರಾಣ ನಿನಗರ್ಪಿತವಾಯಿತ್ತು.
ನೀನಲ್ಲದೆ ಪೆರತೊಂದ ನೆನೆದಡೆ
ಆಣೆ, ನಮ್ಮಾಣೆ ಚೆನ್ನಮಲ್ಲಿಕಾರ್ಜುನಾ.

ಶರೀರವು ಲಿಂಗದೇವನ ಪೂಜೆಗೆ ವೀಸಲಾಗಬೇಕು. ಕರಣಗಳು ಅಂದರೆ ಇಂದ್ರಿಯಗಳು ಲಿಂಗದೇವನ ಕುರಿತೇ ಮಾತನಾಡಬೇಕು; ಅವನ ಮಹಿಮೆಯನ್ನು ಕೇಳಬೇಕು. ಅವನ ಪ್ರಸಾದವನ್ನೇ ಸ್ವೀಕರಿಸಬೇಕು. ಪರಮಾತ್ಮನೆ ಗತಿಮತಿ ಸರ್ವಸ್ವ ಎಂದು ತಿಳಿದ ಕಾರಣ ಪ್ರಾಣವೂ ಅವನಿಗೆ ಅರ್ಪಿತವಾಗಿದೆ. ಆದ್ದರಿಂದ, "ಲಿಂಗದೇವಾ, ನೀನಲ್ಲದೆ ಬೇರೊಂದನ್ನು ನೆನೆದಡೆ ಆಣೆಯಾದೀತು." ಎನ್ನುವರು ಅಕ್ಕನವರು. ಶರಣ ಸತಿ ಭಾವದಿಂದ ಲಿಂಗಪತಿಯನ್ನು ಆರಾಧಿಸುವ ಕಾರಣ ಏಕಪತಿನಿಷ್ಠೆಯನ್ನು ಇಲ್ಲಿ ಪ್ರತಿಪಾದಿಸಿರು ರು.

57. ತನ್ನನಿತ್ತು ತ್ತುಪಡೆಯಬೇಕು

ಅನ್ನವ ನೀಡುವವರಿಂಗೆ ಧಾನ್ಯವೆಸೆವ ಲೋಕ.
ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ.
ಹೆಣ್ಣು ಹೊನ್ನು ಮಣ್ಣು ಮೂರನೂ
ಕಣ್ಣಿನಲ್ಲಿ ನೋಡಿ, ಕಿವಿಯಲ್ಲಿ ಕೇಳಿ
ಕೈಯಲ್ಲಿ ಮುಟ್ಟಿ, ಮಾಡುವ ಭಕ್ತಿ
ಸಣ್ಣವರ ಸಮಾರಾಧನೆಯಾಯಿತು.
ತನ್ನನಿತ್ತು ತುಷ್ಟಿವಡೆವರನೆನಗೆ ತೋರಾ
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ.

ಕರ್ಮಗಳಲ್ಲಿ 3 ಪ್ರಕಾರ. ಹೀನ ಜನ್ಮಕ್ಕೆ ಒಯ್ಯುವ ಕುಕರ್ಮಗಳು; ಶ್ರೇಷ್ಠ ಜನ್ಮಕ್ಕೆ ಒಯ್ಯುವ ಸುಕರ್ಮಗಳು, ಜನ್ಮ ನಿವಾರಣೆ ಮಾಡು ದೈವೀಕರ್ಮಗಳು. ಯಾರು ನಿರಂತರವಾಗಿ ಅನ್ನದಾನ ಮಾಡುವರೋ ಅವರಿಗೆ ಸಮೃದ್ಧ. ಧಾನ್ಯಗಳಿರುವ ಲೋಕ(ಜನ್ಮ) ಪ್ರಾಪ್ತಿಯಾಗುವುದು. ಯಾರು ಹಣವನ್ನು ದಾನ ಮಾಡುವರೋ ಅವರಿಗೆ ಪಾಷಾಣ-ಪರುಷಮಣಿ ಇರುವ ಲೋಕ ಅಂದರೆ ಸಂಪತ್ತು ಅಪಾರ ಇರುವ ಜನ್ಮ ಪ್ರಾಪ್ತಿಯಾಗುವುದು. ಗೃಹಸ್ಥರು ಹೆಣ್ಣು ಹೊನ್ನು ಮಣ್ಣನ್ನು ಕಣ್ಣಿನಲ್ಲಿ ನೋಡಿ, ಕಿವಿಯಲ್ಲಿ ಕೇಳಿ, ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ ಸಣ್ಣವರ ಸಮಾರಾಧನೆ ಎನ್ನುತ್ತಾರೆ ಅಕ್ಕನವರು. ಅದು ಮರು ಜನ್ಮಗಳಿಗೆ ಕಾರಣವಾಗುವುದು. ತಮ್ಮನ್ನೇ. ತಾವು ದೇವರಿಗೆ ಯಾರು ಅರ್ಪಿಸಿಕೊಳ್ಳುವರೋ ಅವರದು ಶ್ರೇಷ್ಠ ಸಾಧನೆ ತಮ್ಮನ್ನೇ ಅರ್ಪಿಸಿಕೊಂಡು ಸಾಧಕರು ಸಂತೋಷಪಡಬೇಕು.

58. ಒಮ್ಮುಖದ ಮೋಹ

ಕಾಮಿಸಿ ಕಲ್ಪಿಸಿ ಕಂದಿ ಕುಂದಿದೆನವ್ವಾ.
ಮೋಹಿಸಿ ಮುದ್ದಿಸಿ ಮರುಳಾದೆನವ್ವಾ,
ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು.
ಎನ್ನ ದೇವ ಚೆನ್ನಮಲ್ಲಿಕಾರ್ಜುನನೆನ್ನನೊಲ್ಲದಿರ್ದಡೆ ಆನೇವೆನವ್ವಾ?

ಚನ್ನಮಲ್ಲಿಕಾರ್ಜುನ (ಶಿವ)ನನ್ನು ನಾನು ಪ್ರೇಮಿಸಿದೆ; ಬಗೆ ಬಗೆಯಾಗಿ ಅವನ ಪೇಮವನ್ನು ಕಲ್ಪಿಸಿಕೊಂಡೆ. ಆದರೆ ಅವನ ಕಡೆಯಿಂದ ಯಾವುದೇ ಪ್ರತಿಕ್ರಿಯೆಯಿಲ್ಲದೆ ಕಂದಿಹೋದೆ; ಮಾನಸಿಕವಾಗಿ ಕುಂದಿಹೋದೆ. ದೇವನನ್ನು ನಾನು ಮೋಹಿಸಿದೆ, ಮುದ್ದಿಸಿ ಅವನಿಗೆ ಮರುಳಾಗಿದ್ದೇನೆ. ನನ್ನ ಹೃದಯವನ್ನು ಬೇರಾರಿಗೂ ತೆರೆಯದೆ, ದೇವನನ್ನು ತೊರೆಯದೆ ಸಂತೋಷದಿಂದ ನಂಬಿದೆ. ಆದರೆ ನನ್ನನ್ನು ದೇವನು ಅರ್ಥಮಾಡಿಕೊಳ್ಳಲಿಲ್ಲ. ನನ್ನದು ಒಮ್ಮುಖದ ಪ್ರೀತಿ(One side love)ಯಾಯಿತು. ದೇವನು ನನ್ನನ್ನು ಒಲ್ಲದಿದ್ದರೆ ನಾನು ಏನು ಮಾಡಬಲ್ಲೆ?

59. ಅರಮನೆಯ ಬಂಧನದಿಂದ ಹೊರಕ್ಕೆ

ಎಳೆವರದಲ್ಲಿ ಮೋಹಮೊಳೆ ಹುಟ್ಟಿತ್ತು,
ಗುರುಹಸ್ತದಲ್ಲಿ ಅಂಕುರವಾಯಿತ್ತು,

ಏಳೆಲೆ ಹೋಯಿತ್ತು ಬಳಗದ ನಡುವೆ.
ಕೇಳೆಲೆಯವ್ವಾ, ನೀನು ಕೇಳು ತಾಯೆ.
ಒಂಬತ್ತೆಲೆ ಇಂದಿಂಗೆ ಪೂರ್ಣವಾಯಿತ್ತು ನೋಡವ್ವಾ.
ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ
ಲೋಕದವರ ಸಂಬಂಧವಿಲ್ಲೆಂದು
ಬಿಟ್ಟು ತೊಲಗಿದೆನು ಕಾಣಾ ಎಲೆಯವ್ವಾ.

ಅಕ್ಕನವರ ಜೀವನದಲ್ಲಿ ನಡೆದ ದುರ್ಘಟನೆ ಅರಮನೆಯ ಬಂಧನ. ಕೌಶಿಕ ರಾಜನ ಕಾಕದೃಷ್ಟಿ ಅಕ್ಕನವರ ಮೇಲೆ ಬಿದ್ದು ಅವರು ಮೂರು ಕರಾರುಗಳನ್ನು ಹಾಕಿ ಅರಮನೆಗೆ ನಡೆದರು. ಗುರು ಲಿಂಗ ಜಂಗಮ ಪೂಜೆಗೆ ಅಡ್ಡಿ ಮಾಡಬಾರದು; ಮೂರು ತಪ್ಪುಗಳನ್ನು ಮಾಡಿದರೆ ಅರಮನೆಗೂ ತನಗೂ ಸಂಬಂಧವಿಲ್ಲ ಎಂಬ ಕರಾರು ಹಾಕಿದರು. ಮೂರನೆಯ ಕರಾರನ್ನು ಕೌಶಿಕ ಮುರಿದಾಗ ಅಕ್ಕನವರು ಅರಮನೆಯಿಂದ ಹೊರಬೀಳುವರು. ಈ ಸುದ್ದಿ ಕೇಳಿ ತಾಯಿ ತಂದೆ ಮುಂತಾದವರು ಬಂದು ಭೇಟಿಯಾದಾಗ ಹೇಳಿರುವ ವಚನವಿದು.

ಅತ್ಯಂತ ಕಿರಿಯವಯಸ್ಸಿನಲ್ಲೇ ಚನ್ನಮಲ್ಲಿಕಾರ್ಜುನನ ಮೋಹ ಮೊಳಕೆಯೊಡೆದಿತ್ತು. ಗುರುವಿನ ಹಸ್ತ ನೆತ್ತಿಯ ಮೇಲೆ ಬಿದ್ದಾಗ ಆ ಮೋಹ ಅಂಕುರವಾಗಿ ಬೆಳೆಯಿತು. ಏಳೆಲೆ ಒಡೆಯುವಂತೆ ನನ್ನ ಮನೆಯಲ್ಲಿ ವೃದ್ಧಿಯಾಯಿತು. ಅವ್ವಾ ಕೇಳು, ಇಂದಿಗೆ ಒಂಬತ್ತು ಎಲೆ ಅರಳಿದವು. ನನ್ನ ಸಂಕಲ್ಪ ಪೂರ್ತಿಯಾಯಿತು. ಚನ್ನಮಲ್ಲಿಕಾರ್ಜುನ ನನ್ನಪತಿ. ಲೋಕದ ಪುರುಷರು ನನಗೆ ಸಂಬಂಧವಿಲ್ಲವೆಂದು ಬಿಟ್ಟು ತೊಲಗುತ್ತಿದ್ದೇನೆ.

60. ಸಜ್ಜನ ಗಂಡನೊಡನೆ ಸಂಸಾರ

ಅತ್ತೆ ಮಾಯೆ, ಮಾವ ಸಂಸಾರಿ.
ಮೂವರು ಮೈದುನರು ಹುಲಿಯಂತಹವರು.
ನಾಲ್ವರು ನಗೆವೆಣ್ಣು ಕೇಳು ಕೆಳದಿ.
ಐವರು ಭಾವದಿರನೊಯ್ವ ದೈವವಿಲ್ಲ.
ಆರು ಪ್ರಜೆಯತ್ತಿಗೆಯರ ಮೀರಲಾರೆನು.
ತಾಯೆ, ಹೇಳುವಡೆ ಏಳು ಪ್ರಜೆ ತೊತ್ತಿರ ಕಾಹು.
ಕರ್ಮವೆಂಬ ಗಂಡನ ಬಾಯ ಟೊಣೆದು,
ಹಾದರವನಾಡುವೆನು ಹರನಕೂಡೆ.
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ:
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೆಂಬ
ಸಜ್ಜನ ಗಂಡನ ಮಾಡಿಕೊಂಡೆ.

ಮನಸ್ಸು ಎನ್ನುವ ಅತ್ತೆ ಮಾಯಾಗುಣದಿಂದ ಕೂಡಿದೆ. ಬುದ್ಧಿ ಎನ್ನುವ ಮಾವ ನಾನು ನನ್ನದು ಎಂಬ ಭ್ರಮೆಯಲ್ಲಿ ಮುಳುಗಿರುವ ಸಂಸಾರಿ. ಕಾರ್ಮಿಕ, ಮಾಯಾ ಮತ್ತು ಆಣವ ಎಂಬ ಮೂರು ಮಲಗಳೆಂಬ ಮೈದುನರು ಹುಲಿಯಂತಹ ಬಲಿಶಾಲಿಗಳು ಚಿತ್ತಮನಬುದ್ಧಿ ಅಹಂ ಎಂಬ ಅಂತಃಕರಣ ಚತುಷ್ಟಯ ಎಂಬ ಓರಗಿತ್ತಿಯರ ಕಾಟ, ಶಬ್ದ ಸ್ಪರ್ಶ ರೂಪ

ರಸ ಗಂಧ ಎಂಬ ಐವರು ಭಾವಂದಿರ ಕಾಟ ಬಹಳ. ಕಾಮಕ್ರೋಧ ಲೋಭ ಮೋಹ ಮದ ಮತ್ಸರ ಎಂಬ ಅತ್ತಿಗೆಯರ ಹಿಂಸೆ; ಸಪ್ತ ವ್ಯಸನಗಳು ಎಂಬ ಸೇವಕರ ಕಾವಲು ಬೇರೆ, ಜನ್ಮಜನ್ಮಾಂತರ ಕರ್ಮ ಎಂಬ ಗಂಡನ ಕಾಟ ಬೇರೆ, ಇದನ್ನು ಗೆಧ್ದು ನಾನು ದೇವನ ಕೂಡ ಸರಸವಾಡುತ್ತಿರುವೆನು.

ನನ್ನ ಮನಸ್ಸನ್ನು ದೈವೀಕರಿಸಿ ಘನಮನವಾಗಿ ಮಾಡಿ ಅದರ ಸಹಾಯದಿಂದ ಶಿವನೊಡನೆ ಅನುಭಾವ ಮಾಡುವುದನ್ನು ಕಲಿತೆ. ಕರ್ಮವೆಂಬ ಗಂಡನ ಬಿಟ್ಟು ಚನ್ನಮಲ್ಲಿಕಾರ್ಜುನ ದೇವರ ದೇವನಾದ ಲಿಂಗದೇವನೆಂಬ ಸಜ್ಜನಗಂಡನ ಮಾಡಿಕೊಂಡೆ.

61. ಶಿವನ ಬಗ್ಗೆ ಮೋಹ

ಕಾಮ ಬಲ್ಲಿದನೆಂದಡೆ ಉರುಹಿ ಭಸ್ಮವ ಮಾಡಿದ.
ಕಾಲ ಬಲ್ಲಿದನೆಂದಡೆ ಕೆಡಹಿ ತುಳಿದ.
ಎಲೆ ಅವ್ವಾ, ನೀನು ಕೇಳಾ ತಾಯೆ.
ಬ್ರಹ್ಮ ಬಲ್ಲಿದನೆಂದಡೆ ಶಿರವ ಚಿವುಟಿಯಾಡಿದ,
ಎಲ್ಲೆ ಅವ್ವಾ ನೀನು ಕೇಳಾ ತಾಯೆ.
ವಿಷ್ಣು ಬಲ್ಲಿದನೆಂದಡೆ ಆಕಳ ಕಾಯ್ದಿರಿಸಿದ.
ತ್ರಿಪುರದ ಕೋಟೆ ಬಲ್ಲಿತ್ತೆಂದಡೆ
ನೊಸಲ ಕಂಗಳಲುರುಹಿದನವ್ವಾ.
ಇದು ಕಾರಣ, ಚೆನ್ನ ಮಲ್ಲಿಕಾರ್ಜುನನೆ ಗಂಡನೆನಗೆ
ಜನನ ಮರಣಕ್ಕೊಳಗಾಗದ ಬಲುಹನೇನ ಬಣ್ಣಿಪೆನವ್ವಾ.

ಕಾಮ ಎಲ್ಲರ ಮನದಲ್ಲಿ ಮೂಡುವ ಶಕ್ತಿಶಾಲಿ ಎನ್ನೋಣವೆ? ಅವನನ್ನು ಮೂರನೆಯ ಕಣ್ಣು ತೆರೆದು ಶಿವನು ಸುಟ್ಟು ಬೂದಿ ಮಾಡಿದ. ಕಾಲಾಸುರ ಬಹಳ ಶಕ್ತಿಶಾಲಿ ಎನ್ನೋಣವೇ ಅವನನ್ನು ಶಿವನು ಕೆಡವಿ ಕಾಲಲ್ಲಿ ತುಳಿದುಹಾಕಿಬಿಟ್ಟ. ಎಲೆ ತಾಯಿ ಕೇಳು ಬ್ರಹ್ಮನನ್ನು ಶಕ್ತಿಶಾಲಿ ಎನ್ನೋಣವೆ? ಅವನ ತಲೆಯನ್ನು ಚಿವುಟಿ ಹಾಕಿದ. ವಿಷ್ಣು ಶ್ರೇಷ್ಠ ಎನ್ನೋಣವೆ? ದನಗಳನ್ನು ಕಾಯ್ದ. ತ್ರಿಪುರಾಸುರರು ಶಕ್ತಿಶಾಲಿಗಳು ಅವರ ಕೋಟೆ ಬಹು ಬಲಿಷ್ಠ ಎನ್ನೋಣವೆ? ಶಿವನು ಹಣೆಗಣ್ಣು ತೆರೆದು ಸುಟ್ಟು ಹಾಕಿದ. ಇದು ಕಾರಣ ಚನ್ನಮಲ್ಲಿಕಾರ್ಜುನನೆ ಗಂಡನೆನಗೆ ಅವನು ಜನನ–ಮರಣಕ್ಕೆ ಒಳಗಾಗದ ವಿಶೇಷವನ್ನು ಏನೆಂದು ಬಣ್ಣಿಸಲಿ? ಅದಕ್ಕಾಗಿ ನಾನು ಅವನನ್ನು ಪ್ರೀತಿಸುತ್ತಿದ್ದೇನೆ.

ಅಕ್ಕನವರು ಬಾಲ್ಯದಿಂದಲೂ ಶಿವನನ್ನು ಆರಾಧಿಸಿದರಷ್ಟೇ ಅಲ್ಲ ಅಪಾರವಾಗಿ ಪ್ರೀತಿಸಿದರು. ಅವರ ವಚನಗಳಲ್ಲಿ ಶಿವನ ವರ್ಣನೆ ಅಪಾರವಾಗಿ ಬರುತ್ತದೆ. ಕಾಲಾನಂತರದಲ್ಲಿ ಗುರು ಬಸವಣ್ಣನವರ ತತ್ವಗಳನ್ನು ತಿಳಿದುಕೊಂಡರು. ಅವರ ಪ್ರೀತಿ ನಿರ್ಗುಣೋಪಾಸನೆಯತ್ತ ಹರಿಯಿತು. ಗುರು ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮೇಶ್ವರರು ಶೈವಭಕ್ತಿಯಿಂದ ಲಿಂಗಭಕ್ತಿಗೆ ಬಂದವರು. ಉಳಿದ ಶರಣರು ಉದಾ: ಚನ್ನಬಸವಣ್ಣನವರು, ಮಡಿವಾಳ ಮಾಚಿದೇವರು, ಹಡಪದ ಅಪ್ಪಣ್ಣ ಮುಂತಾದವರು ನೇರವಾಗಿ ಲಿಂಗಭಕ್ತಿಗೆ ಬಂದವರು. ಹೀಗಾಗಿ ಮೊದಲ ಮೂವರ ವಚನಗಳಲ್ಲಿ ಆರಂಭದ ದಿನಗಳಲ್ಲಿ ಶಿವೋಪಾಸನೆ ಕಂಡು ಬರುತ್ತದೆ. ನಂತರ ನಿರಾಕಾರ ಉಪಾಸನೆಗೆ ಪರಿವರ್ತನೆಗೊಳ್ಳುತ್ತದೆ. ಆದ್ದರಿಂದ ಮೊದಲ ಹಂತದ ವಚನಗಳಲ್ಲಿ

ಕೂಡಲ ಸಂಗಮದೇವ, ಚನ್ನಮಲ್ಲಿಕಾರ್ಜುನ ಮತ್ತು ಕಪಿಲಸಿದ್ಧಮಲ್ಲಿಕಾರ್ಜುನ ಸರಿ ಹೊಂದುತ್ತವೆ. ಅದಕ್ಕಾಗಿಯೇ ಗುರು ಬಸವಣ್ಣನವರ ಎರಡನೆ ಹಂತದ ವಚನಗಳಲ್ಲಿ ಅಂಕಿತವಾಗಿ ಗುರು ಬಸವಣ್ಣನವರೇ ಬಳಸಿರುವ ಲಿಂಗದೇವವನ್ನು ನಾನು ಇರಿಸಿದ್ದು. ಅದೇ ರೀತಿ ಅಕ್ಕನವರು ಮೊದಲು ಚನ್ನಮಲ್ಲಿಕಾರ್ಜುನ, ಶ್ರೀಶೈಲ ಚನ್ನಮಲ್ಲಿಕಾರ್ಜುನ ಎಂದು ಅಂಕಿತನಾಮವನ್ನು ಬಳಸಿ ನಂತರ ಚನ್ನಮಲ್ಲಿಕಾರ್ಜುನದೇವರ ದೇವ ಎಂದು ಬಳಸಿದ್ದಾರೆ. ಈ ಬದಲಾವಣೆಯನ್ನು ತಾತ್ವಿಕ ಚಿಂತನೆ ಇಲ್ಲದಿರುವ ಕಾರಣ ಸಾಹಿತಿಗಳು ಗಮನಿಸಿಲ್ಲ, ಅದೇ ರೀತಿ ಶ್ರೀ ಗುರು ಸಿದ್ಧರಾಮೇಶ್ವರರು ಮೊದಲು ಕಪಿಲಸಿದ್ಧಮಲ್ಲಿಕಾರ್ಜುನ ಬಳಸಿದ್ದಾರೆ. ನಂತರ ಯೋಗಿನಾಥ ಎಂದು ಬಳಸಿದ್ದಾರೆ.

ಉತ್ತರಾರ್ಧದ ವಚನಗಳು

ಶರಣ. ಸಚ್ಚಿದಾನಂದ ಚಟ್ನಳ್ಳಿ ಇವರು ಅಕ್ಕನವರ ವಚನಗಳ ಎರಡು ಹಂತಗಳನ್ನು ಗುರುತಿಸಿ ವಚನಗಳನ್ನು ವರ್ಗೀಕರಿಸಿದ್ದಾರೆ. ಈವರೆಗೆ ಚನ್ನಮಲ್ಲಿಕಾರ್ಜುನ ಅಂಕಿತನಾಮದ ವಚನಗಳಿಗೆ ವ್ಯಾಖ್ಯಾನ ಮಾಡಲಾಗಿದೆ. ಇನ್ನು ಮುಂದೆ ಚನ್ನಮಲ್ಲಿಕಾರ್ಜುನ ದೇವರ ದೇವಾ ಎಂಬ ನಿರಾಕಾರ ದೇವನ ಪರಿಕಲ್ಪನೆಯ ವಚನಗಳಿಗೆ ವ್ಯಾಖ್ಯಾನ ಮಾಡಲಾಗುವುದು.

62. ಸಾವಿಲ್ಲದ ಗಂಡ

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ ಅವ್ವಾ!
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆ ಎಲೆ ಅವ್ವಾ! ನೀನು ಕೇಳಾ ತಾಯೆ!
ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು.
ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ.
ಇದು ಕಾರಣ ಚೆನ್ನಮಲ್ಲಿಕಾರ್ಜುನದೇವರ ದೇವ ಚೆಲುವ ಗಂಡನೆನಗೆ
ಈ ಸಾವ, ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು!

ಪರಮಾತ್ಮನಿಗೆ ಸಾವಿಲ್ಲ, ಏಕೆಂದರೆ ಅವನಿಗೆ ಹುಟ್ಟೇ ಇಲ್ಲ. ಅವನು ಸ್ವಯಂಭು(*Self-born*) ಹುಟ್ಟು–ಸಾವು ಜೀವನದ ಎರಡು ಮುಖಗಳು. ದೇವರಿಗೆ ಇವೆರಡೂ ಇಲ್ಲ. ಹುಟ್ಟು ಸಾವು ಇರುವವರು ಮಾನವರೇ ವಿನಾ ದೇವರಲ್ಲ. ವಿಶೇಷ ಸಾಧನೆ ಮಾಡಿದವರನ್ನು ಮಹಾತ್ಮರು, ದೇವ ಮಾನವರು, ಅವತಾರಿಕರು ಎನ್ನಬಹುದೇ ವಿನಾ ದೇವರು ಎನ್ನಲಾಗದು. ಕೇಡಿಲ್ಲದ ಎಂದರೆ ದೇವರಿಗೆ ನಾಶವಿಲ್ಲ, ಕೇಡು ಇಲ್ಲ. ಏಕೆಂದರೆ ದೇವರೇ ಪರಮೋನ್ನತ ಶಕ್ತಿಯಾದ ಕಾರಣ ಅವನಿಗೆ ಕೆಡುಕು ಮಾಡುವವರು ಮತ್ತಾರೂ ಇಲ್ಲ. ರೂಹಿಲ್ಲದ – ಅಂದರೆ ಪರಮಾತ್ಮನಿಗೆ ಯಾವುದೇ ರೂಪವಿಲ್ಲ, ಆಕಾರವಿಲ್ಲ. ರೂಪವಿರುವುದು ತಾಯಿ ತಂದೆಯರ ಸಂಯೋಗದಿಂದ ಜನಿಸಿದವರಿಗೇ ವಿನಾ ದೇವರಿಗಲ್ಲ. ಪರಮಾತ್ಮನು ಚೆಲುವನು. ಅವನದು ನಾಶವಾಗದ ಕಂದದ ಕುಂದದ ನಿತ್ಯ ಚೆಲುವು (*eternal beauty*) ಅರಳುವ ಹೂವಿನಲ್ಲಿ. ಮೂಡುವ ರವಿಯಲ್ಲಿ ದೇವನ ಚೆಲುವಿಕೆ ವ್ಯಕ್ತವಾಗುವುದು. ಇಂಥ ಚೆಲುವನಿಗೆ ನಾನು ಒಲಿದಿದ್ದೇನೆ ಎಂದು ಅಕ್ಕನವರು ಹೇಳುವರು. ಹಿಂದಿನ ವಚನಗಳಲ್ಲಿ ಅವರು ಪ್ರೀತಿಸಿದ್ದು ಹೊಳೆವ ಕೆಂಜೆಡೆಯ ಮಣಿಮುಕುಟದ ಸುಲಿಪಲ್ಲ ಗೊರವನನ್ನು. ಈಗ ಅವರು ಹೇಳುತ್ತಿರುವುದು ರೂಹಿಲ್ಲದ ಚೆಲುವವನ್ನು ಕುರಿತು. ಈ ವ್ಯತ್ಯಾಸವನ್ನು ತತ್ವಜ್ಞಾನ ದೃಷ್ಟಿಯಿಂದ

ನಾವು ಗಮನಿಸಬೇಕು. ಮೊದಲಿನವ (ಶ್ರೀಶೈಲ) ಚನ್ನಮಲ್ಲಿಕಾರ್ಜುನ, ನಂತರದವ ಪರಮಾತ್ಮ-ಚನ್ನಮಲ್ಲಿಕಾರ್ಜುನ ದೇವರಿಗೆ ದೇವನಾದವನು.

ಈ ವಚನದಲ್ಲಿ ದೇವರ ಸ್ವರೂಪವು ಅಮೋಘವಾಗಿದೆ. ದೇವನು ಎಡೆಯಿಲ್ಲದವನು- ಒಂದು ಜಾಗಕ್ಕೆ ಸೀಮಿತನಾಗಿಲ್ಲ. ಆದ್ದರಿಂದ ಶರಣ ಧರ್ಮದ ಪ್ರಕಾರ 'ದೇವರ ಗುಡಿ' ಎಂಬ ಪರಿಕಲ್ಪನೆ ತಪ್ಪು. ದೇವರಿಗೆ ಗುಡಿ ಕಟ್ಟಲು ಸಾಧ್ಯವೇ ಇಲ್ಲ ಅವನು ವಿಶ್ವವ್ಯಾಪಿ. ಅದೇ ರೀತಿ ಮನೆಯಲ್ಲಿ ಕಟ್ಟುವ 6^1x4^1 ಕೋಣೆಯನ್ನು ದೇವರ ಕೋಣೆ ಎನ್ನಬಾರದು. ಅದನ್ನು ಪೂಜಾಗೃಹ ಎನ್ನಬೇಕು. ದೇವರಿಗೆ ಕಡೆ ಇಲ್ಲ. ಕಡೆ ಎಂದರೆ ಗಡಿ, ಕೊನೆ. ದೇವನು ತೆರಹಿಲ್ಲದೆ- ಅಂದರೆ ಬಿಡಿಬಿಡಿಯಾಗಿ, ಅಲ್ಲಲ್ಲೇ ಪೊಳ್ಳಾಗಿರದೆ ಅಖಂಡವಾಗಿ ಇರುವವನು. ದೇವನಿಗೆ ಕುರುಹಿಲ್ಲ ಸ್ತ್ರೀಯರ ಲಕ್ಷಣಗಳೂ ಇರದು, ಪುರುಷರ ಕುರುಹೂ ಇರದು. ಮೊಲೆ ಮುಡಿ ಸ್ತ್ರೀಯರ ಲಕ್ಷಣಗಳು. ಗಡ್ಡ ಮೀಸೆ ಪುರುಷರ ಲಕ್ಷಣಗಳು ಇವಾವೂ ದೇವರಿಗೆ ಇರದು. ಅಂದರೆ ದೇವನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ.

ಪರಮಾತ್ಮನು ಭವ ಇಲ್ಲದ ಭಯ ಇಲ್ಲದ ನಿರ್ಭಯನು. ಭವ ಎಂದರೆ ಹುಟ್ಟು-ಸಾವುಗಳ ಚಕ್ರ, ದೇವರು ಅಭವ. ಹುಟ್ಟು ಸಾವಿನ ಚಕ್ರದಿಂದ ಹೊರತಾದವನು. ದೇವರಿಗೆ ಭಯವಿಲ್ಲ. ಅವನೇ ಆತ್ಯಂತಿಕ ಶಕ್ತಿಯಾದ್ದರಿಂದ ಅವನು ಯಾರಿಗೂ ಭಯಪಡಬೇಕಾಗಿದಲ್ಲ. ದೇವರಿಗೆ ಕುಲವಿಲ್ಲ; ಹುಟ್ಟಿಯೇ ಇಲ್ಲ ಅಂದಾಗ ಕುಲವೆಲ್ಲಿಂದ ಬಂದೀತು? ಮಾನವರಿಗೆ, ಮಹಾತ್ಮರಿಗೆ ಒಂದು ಕುಲದಲ್ಲಿ, ಜಾತಿಯಲ್ಲಿ ಹುಟ್ಟಿರುವ ಕಾರಣ ಅವರಿಗೆ ಕುಲ, ಜಾತಿ ಇರುತ್ತವೆ. ಸೀಮೆ ಅಂದರೆ ಎಲ್ಲೆ ದೇವರಿಗೆ ಇಲ್ಲ, ಅವನು ವಿಶ್ವವ್ಯಾಪಿಯೂ ಅಹುದು, ವಿಶ್ವೋತ್ತೀರ್ಣನೂ ಅಹುದು. "ಇಂಥ ಪರಮಾತ್ಮ ಲಿಂಗದೇವ ನನಗೆ ಪತಿ; ಸಾಯುವ ಕೆಡುವ ಪುರುಷಾಕಾರವುಳ್ಳ ಗಂಡಸರನ್ನು (ಬಿ)ಸುಡು ತಾಯೆ." ಎಂದು ತಾಯಿಗೆ ಅಕ್ಕನವರು ಹೇಳುತ್ತಾರೆ.

63. ದ್ವಂದ್ವ ಮಾರ್ಗ ಬೇಡ.

ಉಳ್ಳುದೊಂದು ತನು, ಉಳ್ಳುದೊಂದು ಮನ.
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ?
ಸಂಸಾರವನಾವ ಮನದಲ್ಲಿ ತಲ್ಲೀಯವಹೆನಯ್ಯಾ?
ಅಕಟಕಟಾ, ಕೆಟ್ಟೆ ಕೆಟ್ಟೆ! ಸಂಸಾರಕ್ಕಲ್ಲಾ, ಪಾರಮಾರ್ಥಕ್ಕಲ್ಲಾ!
ಎರಡಕ್ಕೆ ಬಿಟ್ಟ ಕರುವಿನಂತೆ!
ಬಿಲ್ಲು ಬೆಳವಲಕಾಯನೊಂದಾಗಿ ಹಿಡಿಯಬಹುದೆ
ಚೆನ್ನಮಲ್ಲಿಕಾರ್ಜುನದೇವರ ದೇವಾ?

ಸಂಸಾರದಲ್ಲಿದ್ದೂ ಪಾರಮಾರ್ಥ ಸಾಧಿಸಬಹುದು ಎಂದು ಬಹುಪಾಲು ಜನರು ಸಾಧಕರಿಗೆ ಹೇಳಲು ಬರುತ್ತಾರೆ. ಸಂಸಾರ ಜೀವನಕ್ಕೆ ಇಳಿಯಬಯಸುವ ಸಾಧಕರು ಈ ಹಿತವಚನವನ್ನು ನಂಬುತ್ತಾರೆ. ಆದರೆ ವೈರಾಗ್ಯದ ಮಾರ್ಗದಲ್ಲಿ ಸಾಗಬಯಸುವ ಸಾಧಕರಿಗೆ ಅಕ್ಕನವರು ಸ್ಪಷ್ಟವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಇರುವುದು ಒಂದು ಶರೀರ, ಒಂದು ಮನಸ್ಸು. ಯಾವ ಮನವನ್ನು ಸಂಸಾರದಲ್ಲಿ ತೊಡಗಿಸಬೇಕು? ಯಾವ ಮನವನ್ನು ಧ್ಯಾನಕ್ಕೆ ಬಳಸಬೇಕು? ಸಂಸಾರದಲ್ಲೂ ನೆಮ್ಮದಿಯಿಂದ ಇರುವಂತಿಲ್ಲ. ಪಾರಮಾರ್ಥದಲ್ಲೂ ನೆಮ್ಮದಿಯಿಂದ ಸಾಧನೆ

ಮಾಡುವಂತಿಲ್ಲ. ಒಂದು ಕರುವಿನ ಮುಂದೆ ಎರಡು ಆಹಾರಗಳಿವೆ. ಒಂದು ತಾಯಿ ಹಾಲು, ಇನ್ನೊಂದು ಎಳೆಯ ಗರಿಕೆಯ ಹುಲ್ಲು. ಇತ್ತ ತಾಯಿಯ ಹಾಲನ್ನು ಕುಡಿಯುವ ಆಸೆ ಅತ್ತ ಎಳೆಯ ಗರಿಕೆಯನ್ನು ತಿನ್ನುವಾಸೆ. ಸಾಂಸಾರಿಕನ ಪಾರಮಾರ್ಥಿಕ ಆಸೆಯ ಪರಿ ಇದು. ಈ ಮಾರ್ಗ ನನಗೆ ಇಷ್ಟವಿಲ್ಲ. ಬಿಲ್ಲು, ಬೆಳವಲಕಾಯಿ ಎರಡನ್ನೂ ಹಿಡಿಯಲು ಸಾಧ್ಯವಿಲ್ಲ. ಗುರಿ ಎಡೆಗೆ ಕಣ್ಣಿಟ್ಟ ಬಿಲ್ಲುಗಾರನ ಎರಡೂ ಕೈಯಿ ಸ್ವತಂತ್ರವಾಗಿರಬೇಕು. ಕೈಯಲ್ಲಿ ರುಚಿಯಾದ ಬೆಳವಲಕಾಯಿ ಹಿಡಿದುಕೊಂಡು ಬಿಲ್ಲು ಹೂಡಲು ಸಾಧ್ಯವಿಲ್ಲ. ಹಾಗೆ ನನ್ನ ಮನ ಚನ್ನಮಲ್ಲಿಕಾರ್ಜುನದೇವರ ದೇವನಿಗೆ ಗುರಿ ಇಟ್ಟ ಬಳಿಕ, ಸಂಸಾರಾಪೇಕ್ಷೆಯ ಬೆಳವಲಕಾಯಿ ಹಿಡಿಯಲು ಸಾಧ್ಯವೇ?

ಅಕ್ಕಮಹಾದೇವಿಯದು ವೀರವೈರಾಗ್ಯ ಮಾರ್ಗ, ಏಕ ನಿಷ್ಠೆಯ ವ್ರತ. ಜಗನ್ಮಾತಾ ಅಕ್ಕಮಹಾದೇವಿ ಕರ್ನಾಟಕದಲ್ಲಿ, ಸ್ವಾಮಿ ವಿವೇಕಾನಂದರು ಭಾರತದಲ್ಲಿ ಅನೇಕರಿಗೆ ಸ್ಫೂರ್ತಿ ನೀಡಿ ವೈರಾಗ್ಯ ಮೂರ್ತಿಗಳಾಗಲು ಪ್ರೇರಣೆಯಾಗಿದ್ದಾರೆ.

64. ಲಜ್ಜೆಯ ಮಾತು.

ಉಳುಹುವ, ಕರವ ನೇಹವುಂಟೆ ನಿಮ್ಮಲ್ಲಿ?
ಸಂಸಾರಕ್ಕೆಡೆಯಾಡದ ಭಕ್ತಿಯೊಳವೆ?
ಎನ್ನ ದೇವ ಚೆನ್ನಮಲ್ಲಿಕಾರ್ಜುನದೇವರ ದೇವಾ,
ಏನ ಹೇಳುವೆನಯ್ಯಾ ಲಜ್ಜೆಯ ಮಾತನು?

ದೇವಾ, ನಿನನ್ನ ಪ್ರೀತಿಸಿಯೂ ದೂರ ಉಳಿಯುವ ಸ್ನೇಹದ ಬಗೆಯುಂಟೆ? ಸಂಸಾರಕ್ಕೆ ಆಸೆ ಪಡುವ ಭಕ್ತಿ ನಿನೆಗೆ ಚೆಂದ ಕಾಣುವುದೆ? ಇದು ನಾಚಿಕೆಗೇಡಿನ ಸಂಗತಿ. ನನಗಂತೂ ಇವೆರಡೂ ಸಹ್ಯವಿಲ್ಲ.

65. ಪಾತಿವ್ರತ್ಯ

ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?
ಲೌಕಿಕಕೊಬ್ಬ ಗಂಡನೆ? ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನ ಮಲ್ಲಿಕಾರ್ಜುನದೇವರ ದೇವನಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ.

ಅಕ್ಕಮಹಾದೇವಿ ಹಿಡಿದ ಮಾರ್ಗ ಉಳಿದ ಲೌಕಿಕರಿಗೆ ವಿಲಕ್ಷಣವಾಗಿ ತೋರುತ್ತಿದೆ. ಎಲ್ಲರೂ ಬುದ್ಧಿ ಹೇಳುವ ಪರಿ "ಎಲ್ಲರಂತೆ ಲೋಕದಲ್ಲಿ ಇರಬೇಕು. ಯಾರಾದರೂ ದೇವರನ್ನು ಗಂಡ ಎಂದುಕೊಳ್ಳುವರೆ? ಲೌಕಿಕದಲ್ಲಿ ಮದುವೆಯಾಗಿ ಪಾರಮಾರ್ಥಿಕವಾಗಿ ಭಕ್ತಿ ಮಾಡಬೇಕು." ಅಂಥವರಿಗೆ ಈ ವಚನದಲ್ಲಿ ಅಕ್ಕನವರು ಉತ್ತರ ಕೊಟ್ಟಿದ್ದಾರೆ.

'ನಾನು ಪತಿವ್ರತೆ. ಇಹಲೋಕದಲ್ಲಿ ಒಬ್ಬ ಗಂಡನನ್ನು ಮಾಡಿಕೊಂಡು ಅವನಿಗೆ ತನುವನ್ನು ಒಪ್ಪಿಸಿ ಮನಸ್ಸನ್ನು ದೇವರಿಗೆ ಅರ್ಪಿಸುವ ದ್ವಂದ್ವ ನನ್ನದಲ್ಲ. ಲೌಕಿಕ ಜೀವನ ರಕ್ಷಣೆಗೆ ಒಬ್ಬ ಗಂಡ, ಪಾರಮಾರ್ಥದ ಭಕ್ತಿಗೆ ದೇವರು- ಇದು ನನ್ನಿಂದ ಸಾಧ್ಯವಿಲ್ಲ. ಪರಮಾತ್ಮನೊಬ್ಬನೇ ನನ್ನ ಪತಿ. ಮಿಕ್ಕಿನ ಪುರುಷರು ಮುಗಿಲ ಮರೆಯ ಬೊಂಬೆಗಳಂತೆ ಅಶಾಶ್ವತ.

66. ದ್ವಂದ್ವ ಜೀವನ ನಿರಾಕರಣೆ

ಒಳಗಣ ಗಂಡನಯ್ಯಾ, ಹೊರಗಣ ಮಿಂಡನಯ್ಯಾ.
ಎರಡನೂ ನಡೆಸಲು ಬಾರದಯ್ಯಾ.
ಲೌಕಿಕ ಪಾರಮಾರ್ಥವೆಂಬೆರಡನೂ ನಡೆಸಲು ಬಾರದಯ್ಯಾ.
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ಬಿಲ್ಲು ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯಾ.

ಬಂಧು ಬಳಗದವರು ಹಿತೋಪದೇಶ ಮಾಡುವರು." ನೋಡುವ ಜನರ ಸಲುವಾಗಿ ಯಾದರೂ ಮದುವೆಯಾಗಿ ಗಂಡನನ್ನು ಮಾಡಿಕೋ. ಮನೆಯಲ್ಲಿ ಮನದಲ್ಲಿ ಭಕ್ತಿಯನ್ನು ಮಾಡಿಕೊ.' ಎಂದು ಹೇಳಿರಬೇಕು ಅವರಿಗೆ ಹೀಗೆ ಅಕ್ಕನವರು ಹೇಳುವರು. "ನನ್ನ ಮನಸ್ಸು ದೇವರಿಗೆ ಮಾರು ಹೋಗಿರುವ ಕಾರಣ ಅವನು ಮನದೊಳಗಿನ ಗಂಡನಾಗುವನು. (ನಿಮ್ಮ ಮಾತು ಕೇಳಿ) ನಾನು ಲೌಕಿಕ ಗಂಡನನ್ನು ವಿವಾಹವಾದರೆ ಅವನಿಗೆ ಮನವನೊಪ್ಪಿಸಲಾಗದೆ (ಸೂಳೆಯಂತೆ) ಕೇವಲ ತನುವನ್ನು ಒಪ್ಪಿಸುವುದರಿಂದ ಅವನು ಗಂಡನಾಗದೆ ಮಿಂಡನಾಗುವನು. ಆದ್ದರಿಂದ ಎರಡನ್ನೂ ನಡೆಸಲು ಬರುವುದಿಲ್ಲ. ನನಗೆ ಲೌಕಿಕ –ಪಾರಮಾರ್ಥವೆರಡನ್ನೂ ನಡೆಸಲು ಬಾರದಯ್ಯ."

" ದೇವಾ, ಬಿಲ್ಲು– ಬೆಳವಲಕಾಯಿ ಎರಡೂ ಹಿಡಿಯಲು ಬಾರದು." ಎನ್ನುವರು ಅಕ್ಕನವರು.

67. ದೃಢ ನಿರ್ಧಾರ

ತನು ಮೀಸಲಾಗಿ, ಮನ ಮೀಸಲಾಗಿ,
ಭಾವವಚ್ಚುಗೊಂಡಿಪ್ಪುದವ್ವಾ,
ಅಚ್ಚುಗನ ಸ್ನೇಹ, ನಿಚ್ಚಟದ ಮೆಚ್ಚುಗೆ
ಬಿಚ್ಚಿ ಬೇರಾಗದ ಭಾವವಾಗೆ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ
ಒಳಗೆ ಗಟ್ಟಿಗೊಂಡಿಪ್ಪನವ್ವಾ

"ಅವ್ವಾ, ನನ್ನ ಶರೀರ, ಮನಸ್ಸು ಲಿಂಗದೇವನಿಗೆ ಮೀಸಲಾಗಿದೆ. ಭಾವವು ದೇವನಲ್ಲಿ ಅಚ್ಚೊತ್ತಿದೆ. ನಮ್ಮಿಬ್ಬರದು ಅತಂತ್ಯ ಅಚ್ಚು ಮೆಚ್ಚಿನ ಸ್ನೇಹ, ನಿಶ್ಚಿತವಾದ ಮೆಚ್ಚುಗೆ; ಬಿಚ್ಚಿ ಬೇರಾಗದ ಭಾವ. ಲಿಂಗದೇವ ಚನ್ನಮಲ್ಲಿಕಾರ್ಜುನ ದೇವರ ದೇವನು ನನ್ನ ಮನದೊಳಗೆ ಗಟ್ಟಿಗೊಂಡಿಪ್ಪನವ್ವಾ" ಎಂದು ವಿವಾಹಕ್ಕೆ ಒತ್ತಾಯ ಮಾಡುವ ತಾಯಿಗೆ ಅಕ್ಕನವರು ಹೇಳುವರು.

68. ಒಲವಿಲ್ಲದ ಸ್ನೇಹ

ಮನ ಮುನ್ನ ಮುನ್ನವೆ ಗುರುವಿನೆಡೆಗೆಯಿದಿತ್ತು.
ತನುವಿನಲ್ಲಿ ಡಿಂಬ ನೋಡಾ!
ಮನ ಬೇರಾದವರ ತನುವನಪ್ಪುವನೆಗ್ಗ ನೋಡಾ.
ಚೆನ್ನಮಲ್ಲಿಕಾರ್ಜುನದೇವರ ದೇವನ ನೋಡಿ ಕೂಡಿ ಬಂದೆಹೆನಂತಿರುವಂತಿರು.

ಬಾಲ್ಲದಲ್ಲಿಯೇ ನನ್ನ ಮನಸ್ಸು ಗುರುದೇವರ ವಾಣಿಯತ್ತ ಆಕರ್ಷಿತವಾಗಿತ್ತು. ಶರೀರದಲ್ಲಿ ಉಳಿದಿರುವುದು ಕೇವಲ ಡಿಂಬ ಮಾತ್ರ. ಅದರಲ್ಲಿ ಜೀವವಿಲ್ಲದ ಸ್ಥಿತಿ. ಮನಸ್ಸು ಬೇರಾಗಿರುವಾಗ

ಅಂಥವರ ಶರೀರವನ್ನು ಅಪ್ಪುವನು ಮೂರ್ಖನೇ ಸರಿ. ನಾನು ದೇವರಲ್ಲಿ ಮನಸ್ಸನ್ನು ನಿಲ್ಲಿಸಿ ಮಾನಸಿಕವಾಗಿ ಅವನೊಡನೆ ಒಂದಾಗಿದ್ದೇನೆ. ಆದ್ದರಿಂದ ನೀನು ದೂರವಿರು." ಎಂದು ಕೌಶಿಕನಿಗೆ ಅಕ್ಕನವರು ಹೇಳಿರುವ ಸಾಧ್ಯತೆ ಇಲ್ಲಿದೆ.

69. ಚಿತ್ತ ಸಮತೆ

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವರ ದೇವಾ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

ಅಕ್ಕನವರ ಜನಪ್ರಿಯ ವಚನಗಳಲ್ಲಿ ಒಂದಾದ ಇದು ಜನತೆಗೆ ವಿಶ್ವಸಂದೇಶ ಸಾರುತ್ತದೆ. ಸಂಸಾರಿ ಇರಲಿ, ಸನ್ಯಾಸಿ ಇರಲಿ ಸ್ತುತಿ ನಿಂದೆಗಳು ಎರಗುವುದು ಸ್ವಾಭಾವಿಕ. ಬೆಟ್ಟದ ಮೇಲೆ ಮನೆ ಮಾಡಬಾರದು; ಮಾಡಿದ ಮೇಲೆ ಕಾಡುಮೃಗಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಅವುಗಳಿಗೆ ಅಂಜಿದರೆ ಆಗದು. ಸಮುದ್ರದ ದಂಡೆಯ ಮೇಲೆ ಮನೆ ಕಟ್ಟಿಕೊಳ್ಳಬಾರದು. ಕಟ್ಟಿಕೊಂಡ ಮೇಲೆ ಎರಗುವ ನೆರೆತೆರೆಗಳಿಗೆ ಅಂಜಬಾರದು. ಅಲೆಗಳು ಸಮುದ್ರದಲ್ಲಿ ಇರುವುದು ಬಹುಸ್ವಾಭಾವಿಕ. ಜನ ಸಂದಣಿಯಿಂದ ಕೂಡಿರುವ ಸಂತೆಯ ಮೈದಾನದ ಬಳಿ ಮನೆ ಮಾಡಿ ಶಬ್ದಕ್ಕೆ ಹೆದರಿದರೆ ಆದೀತೆ? ಅದೇ ರೀತಿ ಈ ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆ ಸ್ವಾಭಾವಿಕ. ಸ್ತುತಿ ಬಂದಾಗ ಬಹಳ ಹಿಗ್ಗಬಾರದು; ನಿಂದೆ ಬಂದಾಗ ಬಹಳ ಕುಗ್ಗಬಾರದು. ಚಿತ್ತ ಸಮತೆಯನ್ನು ಕಾಯ್ದುಕೊಳ್ಳಬೇಕು; ಮನದಲ್ಲಿ ಕೋಪವನ್ನು ತಾಳಬಾರದು ತನುವಿನ ಕೋಪ ಹೊರಗೆ ತೋರಿದರೆ ಮನದ ಕೋಪ ಬೂದಿ ಮುಚ್ಚಿದ ಕೆಂಡದಂತೆ, ತಿಪ್ಪೆಯೊಳಗಣ ಬೆಂಕಿಯಂತೆ ಒಳಗೇ ಸುಡುವುದು.

70. ಕಷ್ಟದ ದಾರಿ

ಕಂಗಳಲ್ಲಿ ಕಾಂಬೆನೆಂದು ಕತ್ತಲೆಯ ಹೊಕ್ಕಡೆಂತಹುದಯ್ಯಾ?
ಬೆಟ್ಟದ ತುದಿಯ ಮುಟ್ಟಲೆಂದು
ಹಳ್ಳಕೊಳ್ಳಂಗಳಲ್ಲಿ ಇಳಿದಡೆಂತಹುದಯ್ಯಾ?
ನೀನಿಕ್ಕಿದ ಸಯದಾನವನೊಲ್ಲದೆ
ಬೇರೆ ಬಯಸಿದೊಡೆಂತಹುದಯ್ಯಾ?
ಚೆನ್ನ ಮಲ್ಲಿಕಾರ್ಜುನದೇವರ ದೇವನ ಘನವನರಿಯಲೆಂದು
ಕಿರುಕುಳಕ್ಕೆ ಸಂದಡೆಂತಹುದಯ್ಯಾ?

ಕಣ್ಣಿಗೆ ನೋಡುವ ಶಕ್ತಿ ಇದೆ ಎಂದು ಕತ್ತಲಲ್ಲಿ ನುಗ್ಗಿದರೆ ಹೇಗೆ? ಬೆಟ್ಟದ ತುದಿಯ

ಮುಟ್ಟಲು ಬಯಸಿ ಹಳ್ಳಕೊಳ್ಳಗಳಲ್ಲಿ ಇಳಿದೊಡೆ ಹೇಗೆ? ದೇವಾ, ನೀನು ಕೊಡುವ ಸಯದಾನ (ಊಟ) ಬಿಟ್ಟು ಬೇರೆ ಬಯಸಿದರೆ ಹೇಗೆ? ಏನು ಮಾಡುವುದು. ಪರಮಾತ್ಮನ ಘನವನ್ನು ಅರಿಯಲು ಹೊರಟು ಬಹುಬಗೆಯ ಕಿರುಕುಳಗಳಿಗೆ ಈಡಾಗಬೇಕಾಗಿದೆ. ಇರಲಿ; ದೇವರು ಕೊಟ್ಟದೆ ಪ್ರಸಾದ.

71. ಶರಣ ಸತಿಯ ವಿವಾಹ

ಇನ್ನೇಕೆ ಮದುವೆಯ ಚಿಂತೆ । ಎನಗೆ
ಎನ್ನ ಶ್ರೀ ಗುರುತಂದೆ ಲಿಂಗದೇವನ ಕೊಟ್ಟ ಬಳಿಕ ॥ಪಲ್ಲವಿ॥

ಪಂಚಕಳಶವು ಪಂಚ ನದಿ ಪಂಚ ಫಲ ತಳಿರು
ಪಂಚಾಭಿಷೇಕ-ಹಸ್ತವು ಮಸ್ತಕದಲಿ
ಪಂಚಮುಖಿ ಶಿವನ ಕಳೆಯರಿದು ಶ್ರೀಗುರು । ಪ್ರಣವ
ಪಂಚಾಕ್ಷರಿಯ ಕರ್ಣದೊಳಗಿಟ್ಟ ಬಳಿಕ ॥ ೧ ॥

ಶರಣಸತಿ-ಲಿಂಗಪತಿಯೆಂದು ಭಸಿತವನಿಟ್ಟು
ಕರೆದು ನಾಲ್ವರು ಹಿರಿಯರನು ಸಾಕ್ಷಿಯಿಟ್ಟು
ಸೆರಗ ಗಂಟಿಕ್ಕಿ, ಕರದೊಳು ಕಂಕಣವ ಕಟ್ಟಿ
ಸ್ಥಿರಪುರುಷನೆಂದು ಸೇಸೆಯನಿಟ್ಟ ಬಳಿಕ ॥ ೨ ॥

ಸತ್ತು ಹುಟ್ಟುವ ಪುರುಷರಿಗೆ ಮನಸು ಮಾಡುವವಳಲ್ಲ
ಮುತ್ತೈದೆತನವನಾರಿಗೂ ಮಾರುವವಳಲ್ಲ
ಕರ್ತೃ ಶ್ರೀ ಚೆನ್ನಮಲ್ಲಿಕಾರ್ಜುನದೇವರ ದೇವನೆನ್ನ
ಕರಸ್ಥಲಕೆ ಬಂದು ನೆಲೆಗೊಂಡ ಬಳಿಕ ॥ ೩ ॥

ಇದೊಂದು ಸುಂದರವಾದ ಸ್ವರ ವಚನ. ಅಕ್ಕನವರು ತಮಗೆ ದೀಕ್ಷೆ ಎಂಬ ವಿವಾಹ ಆದ ಬಗೆಯನ್ನು ಇಲ್ಲಿ ವಿವರಿಸುತ್ತಾರೆ.

ಇನ್ನು ನನಗೆ ಮದುವೆಯ ಚಿಂತೆ ಏಕೆ? ಶ್ರೀಗುರು ಎಂಬ ತಂದೆ ಕರಸ್ಥಲಕ್ಕೆ ಲಿಂಗದೇವನ ಕೊಟ್ಟ ಮೇಲೆ ನನಗೆ ಮದುವೆಯ ಚಿಂತೆ ಇಲ್ಲ.

ಗುರು ಪಂಚ ಕಳಸಗಳನಿಟ್ಟು ಅದರಲ್ಲಿರುವ ನೀರು ಐದು ನದಿಗಳದು ಎಂದು ಭಾವಿಸಿ, ಐದು ಬಗೆಯ ಹಣ್ಣುಗಳನ್ನು ಇಟ್ಟು ಇಷ್ಟಲಿಂಗಕ್ಕೆ ಅಭಿಷೇಕ (ಮಜ್ಜನ) ಮಾಡಿದ. ತಲೆಯ ಮೇಲೆ ಕೈಯನ್ನಿಟ್ಟು, ದೇವನು ಪಂಚಮುಖದಿಂದ ಕೂಡಿದ್ದಾನೆಂಬುದ ತಿಳಿಸಿ ಪ್ರಣವ ಪಂಚಾಕ್ಷರಿ – ಓಂ ನಮಃ ಶಿವಾಯ ಎಂಬುದನ್ನು ಕಿವಿಯಲ್ಲಿ ಉಸುರಿದ ಬಳಿಕ ಇನ್ನೇಕೆ ಮದುವೆಯ ಚಿಂತೆ ನನಗೆ?

ಗುರು ಹಣೆಗೆ ಭಸಿತವನ್ನಿಡುವಾಗ "ನೀನು ಶರಣ ಸತಿ, ನಿನ್ನ ಪತಿ ಲಿಂಗದೇವರು' ಎಂದು ಹೇಳಿ ಬಿಟ್ಟಿದಾರೆ. ಚಿತ್ತ ಮನ ಬುದ್ಧಿ ಅಹಂ ಎಂಬ ಅಂತಃಕರಣ ಚತುಷ್ಟಯಗಳೆಂಬ ಹಿರಿಯರನ್ನು ಸಾಕ್ಷಿಯಾಗಿಟ್ಟುಕೊಂಡು ಈ ದೀಕ್ಷೆ ಎಂಬ ವಿವಾಹ ಮಾಡಿದ್ದಾರೆ. ಕರದಲ್ಲಿ ಕಂಕಣ ಕಟ್ಟಿ, ಲಿಂಗವಸ್ತ್ರದಲ್ಲಿ ದೇವರನ್ನು ಕಟ್ಟಿ, ಇವನೇ ನಿನ್ನ "ಸ್ಥಿರಪುರುಷ" ಎಂದು ಹೇಳಿಬಿಟ್ಟ ಬಳಿಕ ಇನ್ನೇಕೆ ನನಗೆ ಮದುವೆಯ ಚಿಂತೆ?

ಹುಟ್ಟಿ ಸಾಯುವ, ಸತ್ತು ಹುಟ್ಟುವ ಲೌಕಿಕ ಪುರುಷರಿಗೆ ನಾನು ಮನಸ್ಸು ಮಾಡುವವಳಲ್ಲ; ನನ್ನ ಮುತ್ತೈದೆತನವ ಯಾರಿಗೂ ಮಾರುವವಳಲ್ಲ. ಸೃಷ್ಟಿಕರ್ತನಾದ ಲಿಂಗದೇವನು ಇಷ್ಟಲಿಂಗ ರೂಪದಲ್ಲಿ ಕರಸ್ಥಲಕ್ಕೆ ಬಂದ ಬಳಿಕ ಇನ್ನೇಕೆ ನನಗೆ ಮದುವೆಯ ಚಿಂತೆ?

ಈ ಪದ್ಯವನ್ನು ಓದಿ ಮೊದಲೇ ದೀಕ್ಷೆ ಎಂದರೆ ಹೆದರುವ ಲಿಂಗಾಯತರು ಪ್ರತಿಜ್ಞೆ ಮಾಡಿಸುವರೆ ಎಂದು ಮತ್ತಷ್ಟು ಅಂಜಬಹುದು. ಅಕ್ಕನವರ ವ್ಯಕ್ತಿತ್ವವನ್ನು, ಹಂಬಲವನ್ನು ಶ್ರೀಗುರುಲಿಂಗದೇವರು ಅರಿತವರಾಗಿದ್ದರು. ಮಾತ್ರವಲ್ಲ ಇಂಥದೊಂದು ಸುಂದರ ಮೂರ್ತಿಯನ್ನು ಕಟೆಯಬೇಕೆಂಬ ಸಂಕಲ್ಪ ತಳೆದಿದ್ದರು. ಹೀಗಾಗಿ ವಿಶೇಷವಾದ ಆಶೀರ್ವಾದ ಮಾಡಿದ್ದಾರೆ. (ನಾವು ಹೀಗೆ ಪ್ರತಿಜ್ಞೆ ಮಾಡಿಸುವುದಿಲ್ಲ).

72. ಜಂಭದ ಪರಿಣಾಮ

ಮೂಗುತಿ ಹೋಯಿತು ಮುರುಕಿಸುವನಕ
ಮೂಗುತಿ ಹೋಯಿತು ॥ಪಲ್ಲವಿ॥

ಅಣಕವನಾಡುತ ಐವರ ಕೂಡೆ,
ಸೆಣಸುತ ನಾಲ್ವರ ಕೈವಿಡಿದು
ಮಣಕದಿಂದಲಿ ಆರು ಮಂದಿಯ ಕೂಡೆ
ಉಣಕುಳಿತಲ್ಲಿ ಮೈ ಮರೆದೆನಕ್ಕ ! ॥ ೧ ॥

ಅಕ್ಕರೆಯಿಂದಲಿ ಹತ್ತು ಮಂದಿಯ ಕೂಡೆ
ನಕ್ಕರು, ಕೆಲೆದರು ತಮತಮಗೆ !
ಮಕ್ಕಳಾಟಿಕೆಯ ನಾನಾಡುವ ಹೊತ್ತಿಗೆ
ಇಕ್ಕುತಲಿಮೈ ಮರೆದೆನಕ್ಕ ? ॥ ೨ ॥

ಅತ್ತೆ ಮಾರುದ್ದದರುವೆಯ ಕೊಡಲಾಗಿ
ಸುತ್ತೇಳೂ ಕೇರಿಯರು ಸೆಣಸುವರು!
ಚಿತ್ತವಲ್ಲಭ ಚೆನ್ನಮಲ್ಲೇಶನ ದೇವನ ಕೂಡಿ
ಮುತ್ತೈದೆಯಾಗೆನ್ನನಿರಗೊಡರಕ್ಕ ! ॥ ೩ ॥

"ಕೆಲವರು ಮೂಗನ್ನು ತಿರುವಿ ಮುರುಕಿಸುವರು. ಹಾಗೆ ಮುರುಕಿಸುವಾಗ ಮೂಗುತಿಯೇ ಬಿದ್ದು ಹೋಯಿತು. ಹಾಗೆ ನಾನು ಕೊಂಚ ಅಹಂಭಾವದಿಂದ ಬೀಗಿದೆ. ದಿವ್ಯಾನುಭವದ ಮೂಗುತಿ ದೂರಹೋಯಿತು." ಎಂದು ಒಂದು ಅರ್ಥ ಮಾಡಬಹುದು. ಮುಕುತಿ ಹೋಯಿತು ಎಂದು ಅರ್ಥಮಾಡಿದರೆ ಆಗ ಕೆಳಗಿನ ಕಾರಣಗಳಿಂದಾಗಿ ನನಗೆ ಮುಕುತಿ (ಬಿಡುಗಡೆ, *Salvation*)ದೂರ ಹೋಯಿತು ಎಂದಾಗುತ್ತದೆ.

ತಮಾಷೆ ಮಾಡುತ್ತ ಪಂಚೇಂದ್ರಿಯಗಳ ಒಡನಾಡಲು, ಚಿತ್ತ ಮನ ಬುದ್ಧಿ ಅಹಂ ಎಂಬ ಅಂತಃಕರಣಗಳ ಕೂಡ ಸೆಣಸಲು, ಹಮ್ಮಿನಿಂದ ಅರಿಷಡ್ವರ್ಗಗಳ ಒಡನಾಡುತ್ತ ಲೌಕಿಕರಲ್ಲಿ ಬೆರೆತುಬಿಟ್ಟೆ (ಉಣಕುಳಿತಲ್ಲಿ ಮೈಮರೆದೆನಕ್ಕ); ಏಕೆಂದರೆ ಲೌಕಿಕ ಗೆಳತಿಯರು ಹಾಸ್ಯ, ಹರಟೆ, ನಗೆ ಚಾಟಿಕೆಗಳಲ್ಲಿ ಕಾಲ ಕಳೆಯುವರಷ್ಟೆ.

ಅಕ್ಕರೆಯಿಂದ ದಶವಾಯುಗಳ ಒಡನಾಡಿದೆ. ಇವೆಲ್ಲವು ತಮಗೆ ಮನಬಂದಂತೆ ಸಂಚರಿಸಿದವು (ನಕ್ಕರು, ಕೆಲೆದರು ತಮತಮಗೆ). ಹೀಗೆ ಬಹಳ ಸಮಯವನ್ನು ಮಕ್ಕಳಾಟಿಕೆ ಮಾಡುವುದರಲ್ಲಿ ಕಳೆದೆ.

ವಿವೇಕ ಎಂಬ ಅತ್ತೆ ಮಾರುದ್ದದ ಜ್ಞಾನ ಎಂಬ ವಸ್ತ್ರವನ್ನು ಕೊಡುತ್ತದೆ. ಆದರೆ ಅದನ್ನು ಇರಗೊಡದೆ ಸಪ್ತ ವ್ಯಸನಗಳು ದಾಳಿ ಮಾಡಿ ಕಿತ್ತುಕೊಳ್ಳುತ್ತವೆ. ನನ್ನ ಚಿತ್ತವಲ್ಲಭ ದೇವನನ್ನು ಕೂಡಿ ಸಂತೋಷದಿಂದ ಇರಬೇಕೆಂದರೆ ಈ ಎಲ್ಲ ಅಡ್ಡಿ ಆತಂಕ ನನ್ನನ್ನು ಬಿಡುತ್ತಿಲ್ಲ.

73. ಲಿಂಗಭೋಗೋಪಭೋಗಿ

ಉಡುವೆ ನಾನು ಲಿಂಗಕ್ಕೆಂದು.
ತೊಡುವೆ ನಾನು ಲಿಂಗಕ್ಕೆಂದು,
ಮಾಡುವೆ ನಾನು ಲಿಂಗಕ್ಕೆಂದು,
ನೋಡುವೆ ನಾನು ಲಿಂಗಕ್ಕೆಂದು,
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ.
ಮಾಡಿಯೂ ಮಾಡದಂತಿಪ್ಪೆ ನೋಡಾ,
ಆನೆನ್ನ ಚೆನ್ನಮಲ್ಲಿಕಾರ್ಜುನದೇವರ ದೇವನೊಳಗಾಗಿ
ಹತ್ತರೊಡನೆ ಹನ್ನೊಂದಾಗಿಪ್ಪುದನೇನ ಹೇಳುವೆನವ್ವಾ!

ನಾನು ಬಟ್ಟೆಯುಡುವುದು ದೇವನಿಗಾಗಿ, ಭಸ್ಮ-ರುದ್ರಾಕ್ಷಿಗಳೆಂಬ ತೊಡುಗೆ ತೊಡುವುದು ದೇವನಿಗಾಗಿ; ಬೇರೆ ಬೇರೆ ಕ್ರಿಯೆಗಳನ್ನು, ಚಟುವಟಿಕೆಗಳನ್ನು ಮಾಡುವುದೂ ದೇವನಿಗಾಗಿ, ಜಗತ್ತನ್ನು ನೋಡುವುದೂ ಅವನಿಗಾಗಿಯೆ. ನನ್ನ ಒಳಹೊರಗೆಲ್ಲ ಅವನೇ ತುಂಬಿಕೊಂಡಿದ್ದಾನೆ. ಕೆಸರಿನಲ್ಲಿ ಅರಳಿದರೂ ಕೆಸರನ್ನು ಅಂಟಿಸಿಕೊಳ್ಳದೆ ಅರಳುವ ತಾವರೆಯಂತೆ ಕ್ರಿಯೆಗಳನ್ನು ಮಾಡಿಯೂ ಮಾಡದಂತಿರುವೆ. ನಾನು ಆ ದೇವನ ಒಳಗಾಗಿ ಬಾಳುತ್ತಿರುವೆ. ಲೋಕದ ದೃಷ್ಟಿಯಿಂದ ವ್ಯವಹಾರ ಮಾಡುತ್ತಿದ್ದರೂ ಹತ್ತನ್ನು ದಾಟಿ, ಹನ್ನೊಂದು ಇರುವಂತೆ ಅತೀತಳಾಗಿದ್ದೇನೆ.

"ವಚನ ಕಿರಣ"

ಕಾಯಕ್ಲೇಶದಿಂದ ತನುಮನ ಬಳಲಿ ಧನವ ಗಳಿಸಿ,
ಗುರುಲಿಂಗಜಂಗಮಕ್ಕೆ ವೆಚ್ಚಿಸಿ,
ದಾಸೋಹವ ಮಾಡುವ ಭಕ್ತನ ಪಾದವ ತೋರಯ್ಯಾ, ನಿಮ್ಮ ಧರ್ಮ.
ಅದೇಕೆಂದಡೆ, ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ನುಡಿ ಪಾವನ.
ಆತಂಗೆ ಉಪದೇಶವ ಮಾಡಿದ ಗುರು ನಿರಂಜನ ನಿರಾಮಯ.
ಅಂತಹ ಭಕ್ತನ ಕಾಯವೆ ಕೈಲಾಸವೆಂದು ಹೊಕ್ಕು,
ಲಿಂಗಾರ್ಚನೆಯ ಮಾಡುವ ಜಂಗಮ ಜಗತ್ಪಾವನ.
ಇಂತಿವರಿಗೆ ನಮೋ ನಮೋ ಎಂಬೆ ಕೂಡಲ ಚೆನ್ನಸಂಗಯ್ಯಾ.

ಕರ್ನಾಟಕ ಸಂಗೀತ ಪಿತಾಮಹ:
ಭಕ್ತಿ ಭಂಡಾರಿ ಗುರು ಬಸವೇಶ್ವರರು

-ವಿದ್ವಾನ್ ಬಿ.ಎಸ್.ವಿಜಯರಾಘವನ್.

"ಸಂಗೀತದ ಇತಿಹಾಸ ಬಹು ಪುರಾತನವಾದದ್ದು. ಇದರಲ್ಲಿ ಕರ್ನಾಟಕದ ಶರಣರು ಮತ್ತು ಹರಿದಾಸರು ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಆದ್ದರಿಂದಲೇ ಇದಕ್ಕೆ 'ಕರ್ನಾಟಕ ಸಂಗೀತ' ಎಂದು ಹೆಸರು ಬಂದಿತು. ಅಲ್ಲದೆ ಕರ್ನಾಟಕ ಸಂಗೀತದ ಆದ್ಯ ಪ್ರವರ್ತಕರಾದ ಭಕ್ತಿ ಭಂಡಾರಿ ಬಸವೇಶ್ವರರನ್ನು "ಕರ್ನಾಟಕ ಸಂಗೀತ ಪಿತಾಮಹ "ಎನ್ನಬಹುದು ಎಂಬ ಈ ಮಾತನ್ನು ವಿದ್ವಾನ್ ವಿಜಯರಾಘವನ್ ಹೇಳಿದರು.

ಈಗ ಕರ್ನಾಟಕ ಸಂಗೀತಕ್ಕೆ ಶಿವಶರಣರ ಕೊಡುಗೆಯನ್ನು ಗಮನಿಸೋಣ. ಕರ್ನಾಟಕದ ಇತಿಹಾಸ ಬಹು ಪುರಾತನವಾದದ್ದು. ಸುಮಾರು ೧೨ನೇ ಶತಮಾನದಲ್ಲಿಯೇ ಶಿವಶರಣರಲ್ಲಿ ಪ್ರಮುಖರಾದ ಬಸವಣ್ಣನವರು, ಅಲ್ಲಮಪ್ರಭುಗಳು, ಅಕ್ಕಮಹಾದೇವಿ ಅವರುಗಳ 'ವಚನ ಸಾಹಿತ್ಯ'ವನ್ನು ರಚಿಸಿದರು. ಜನಮನದಲ್ಲಿ ಈ ವಚನಗಳು ಮಹಾಪ್ರಭಾವವನ್ನೇ ಉಂಟು ಮಾಡಿತು, ಈ ಸಾಹಿತ್ಯ ಜನಪ್ರಿಯವಾಯಿತು. ಎಲ್ಲರೂ ಇವುಗಳನ್ನು ಹಾಡುವುದಕ್ಕೆ ಪ್ರಾರಂಭ ಮಾಡಿದರು.

ಶಿವಶರಣರು ವಚನಗಳನ್ನಲ್ಲದೆ ಹಾಡುಗಳನ್ನೂ ರಚಿಸಿದ್ದಾರೆ ಮತ್ತು ಅವುಗಳನ್ನು 'ಸ್ವರವಚನಗಳು' ಎಂದು ಕರೆದಿದ್ದಾರೆ ಎಂಬುದಾಗಿ ಇತ್ತೀಚಿನ ವಿದ್ವಾಂಸರ ಸಂಶೋಧನೆಯಿಂದ ತಿಳಿದು ಬಂದಿದೆ.

ನನ್ನ ಕನ್ನಡ ಎಂ.ಎ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ, ನನ್ನ ಗುರುಗಳಾದ ಪ್ರೊ. ತೀ.ನಂ ಶ್ರೀಕಂಠಯ್ಯನವರು ಈ ವಿಷಯವನ್ನು ಕುರಿತು ಮೊಟ್ಟಮೊದಲು ಸಂಶೋಧನೆ ಮಾಡಿದರು. ತಮ್ಮ 'ಸಮಾಲೋಚನೆ' ಎಂಬ ಪುಸ್ತಕದಲ್ಲಿ ಅವರು ಮಹಾದೇವಿಯಕ್ಕನ ಒಂದು ವಚನವನ್ನು ಗಮನಿಸಿ, 'ಇದು ವಚನವಲ್ಲ, ಅಕ್ಕ ಇದನ್ನು ಮೊದಲು ಹಾಡಾಗಿ ರಚಿಸಿರಬೇಕು' ಎಂಬ ನಿರ್ಣಯಕ್ಕೆ ಬಂದರು. ಆ ಹಾಡಿನ ಮೇಲೆ ಕಾಂಬೋಧೀ ರಾಗದ ಹೆಸರೂ ಇದೆ. ಈ ಜಾಡನ್ನು ಹಿಡಿದು, ಮುಂದೆ ನನ್ನ ಇನ್ನೊಬ್ಬ ಗುರುಗಳಾದ ಡಾ. ಎಲ್ ಬಸವರಾಜು ಅವರು ಸಂಶೋಧನೆಯನ್ನು ಮುಂದುವರೆಸಿ, 'ಶೂನ್ಯ ಸಂಪಾದನೆ' ಮೊದಲಾದ ಗ್ರಂಥಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ ಶಿವದಾಸ ಗೀತಾಂಜಲಿ ಎಂಬ ಮಹಾಗ್ರಂಥವನ್ನು ಬರೆದಿದ್ದಾರೆ. ಇದನ್ನು ಪರಮ ಪೂಜ್ಯ ಲಿಂಗೈಕ್ಯ ಜಗದ್ಗುರುಗಳಾದ ಡಾ॥ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಅರ್ಪಣೆ ಮಾಡಿರುತ್ತಾರೆ. ಶ್ರೀ ಗಳು ತಮ್ಮ ಸಂತೋಷವನ್ನು ಆ ಕೃತಿಯಲ್ಲಿ ಹೀಗೆ ವ್ಯಕ್ತಮಾಡಿದ್ದಾರೆ.

"ಈ ಗ್ರಂಥಸಂಪಾದಕರಾದ ಶ್ರೀ.ಎಲ್ ಬಸವರಾಜು ನಮ್ಮ ಬಳಿಗೊಂದು ದಿನ ಬಂದು ಬಸವಾದಿ ಪ್ರಮಥರೂ ರಾಗತಾಳ ಸಹಿತವಾದ ಹಾಡುಗಳನ್ನು ಬರೆದಿರುವರೆಂದು ಹೇಳಿದರು. ಕೇಳಿ ನಮಗೆ ಅತ್ಯಾಶ್ಚರ್ಯವಾಯಿತು. ಆಮೇಲೆ ಅವರು ತಮ್ಮ ಹೇಳಿಕೆಯನ್ನು ಸೋದಾಹರಣವಾಗಿ ವಿವರಿಸಿದರು. ನಮಗೆ ಅತ್ಯಾನಂದವಾಯಿತು. ನಮ್ಮ ಸಂಸ್ಕೃತಿಗೆ, ಅಮೃತ ತೀರ್ಥಸ್ವರೂಪರಾದ ಪ್ರಮಥರ ಗೇಯಕೃತಿಗಳು ಇಡೀ ಮಾನವಲೋಕದ ಸಾರಸ್ವತ ಸ್ವತ್ತೆಂದು

ಅವನ್ನು ಪ್ರಕಟಿಸಲು ಸಂಕಲ್ಪಿಸಿದೆವು.

ಶ್ರೀ ಎಲ್. ಬಸವರಾಜು ಅವರು ತಮ್ಮ ಈ ಗ್ರಂಥದ ಪ್ರಥಮಾವೃತ್ತಿಯನ್ನು ನಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಅನುವು ಮಾಡಿ, ಅದರ ಅಚ್ಚಿನ ಕಾರ್ಯಭಾರವನ್ನೆಲ್ಲ ಹೊತ್ತುದಕ್ಕಾಗಿ ಅವರಿಗೆ ನಮ್ಮ ಆಶೀರ್ವಾದಗಳು.

ಈ ಗ್ರಂಥ ಸಂಪಾದಕರ ಸಾಹಿತ್ಯ ಸಂಶೋಧನ ಜೀವನ ಉತ್ತರೋತ್ತರ ವಿಶಾಲವೂ ರಾಷ್ಟ್ರಹಿತಕಾರಿಯೂ ಆಗಲೆಂದು ಹಾರೈಸುವೆವು"

ಶಿವಶರಣರು ರಚಿಸಿರುವ ಸ್ವರವಚನಗಳ ಸ್ವರೂಪ ಸ್ಥೂಲವಾಗಿ ಹೀಗಿದೆ: ಮೊದಲು ಪಲ್ಲವಿ, ಬಳಿಕ ಮೂರು ಅಥವಾ ಐದು ಚರಣಗಳು. ಸ್ವರವಚನಗಳಿಗೆ ಅವರು ಬಳಸಿರುವ ರಾಗಗಳ ಹೆಸರು ಹೀಗಿವೆ: ಆಹಿರಿ, ಆರಭಿ, ಕಾಂಬೋಧಿ, ಕೈಶಿಕಿಮಂಗಳ, ದೇವಗಾಂಧಾರಿ, ಘೂರ್ಜರಿ, ಗುಂಡುಕ್ರಿಯ, ಗೌಳ, ಕನ್ನಡಗೌಳ, ನಾರಾಯಣಿ, ಮಾಳವಿ, ಗೌಳಿಪಂತು, ಜಂಝೂಟಿ, ಪುನ್ನಾಗವರಾಳಿ, ಫಲಮಂಜರಿ, ಭೌಳಿ, ದೇಶಾಕ್ಷಿ, ದೇಶಿ, ಧನ್ಯಾಸಿ, ನಾಟಿ, ನಾದನಾಮಕ್ರಿಯೆ, ಪಹಾಡಿ, ಪಂತುವರಾಳಿ, ಭೂಪಾಳಿ, ಭೈರವಿ, ಸಾರಂಗ, ಮಲಹರಿ, ಮಧುಮಾದವಿ, ರಾಮಕ್ರಿಯ, ಲಲಿತ, ವರಾಳಿ, ವಸಂತ, ಮಾಳವಗೌಳ, ಹಿಂದೋಳ, ಶಂಕರಾಭರಣ, ಶ್ರೀರಾಗ, ಸೌರಾಷ್ಟ್ರ – ಹೀಗೆ ಇಂದು ನಮ್ಮ ಕರ್ನಾಟಕ ಸಂಗೀತದಲ್ಲಿ ಪ್ರಸಿದ್ಧವಾಗಿರುವ ಎಲ್ಲ ರಾಗಗಳನ್ನು ಬಳಸಿಕೊಂಡು 'ಸ್ವರವಚನ'ಗಳನ್ನು ರಚಿಸಲಾಗಿದೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಮೇಲ್ಕಂಡ ರಾಗಗಳನ್ನು 'ಬತ್ತೀಸ ರಾಗಗಳು' ಎಂದು ಬಣ್ಣಿಸಿದ್ದಾರೆ. ತಾಳಗಳಲ್ಲಿ ಆದಿತಾಳ, ರೂಪಕತಾಳ, ಅಟ್ಟತಾಳ ಮತ್ತು ಝುಂಪೆ ತಾಳಗಳನ್ನು ಬಳಸಲಾಗಿದೆ.

ಅನಂತರ ೧೬ನೆಯ ಶತಮಾನದಲ್ಲಿ ಬಂದ ಹರಿದಾಸರು ಇದೇ 'ಬತ್ತೀಸ' ರಾಗ –ತಾಳಗಳನ್ನು ಬಳಸಿಕೊಂಡು ಪದಗಳನ್ನು ರಚಿಸಿರುವುದನ್ನು ನಾವು ಗಮನಿಸಬಹುದು. ಇದಲ್ಲದೆ, ಶಿವಶರಣರ ವಚನಗಳು ಹರಿದಾಸರ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ. ಅವರ ವಚನಗಳನ್ನು ಅನುಸರಿಸಿ, ಅನುಕರಿಸಿ ಹರಿದಾಸರು ಉಗಾಭೋಗಗಳನ್ನು ರಚಿಸಿದ್ದಾರೆ. ಕೆಲವು ಉದಾಹರಣೆಗಳನ್ನು ಗಮನಿಸಿ:

ವಚನ:

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ
ಇದಕಾರಂಜುವರು, ಇದಕಾರಳುಕುವರು
'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ
ನಮ್ಮ ಕೂಡಲಸಂಗಮದೇವರು ಬರೆದ
ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳಿಗಳವಲ್ಲ

– ಗುರು ಬಸವಣ್ಣನವರು

ಉಗಾಭೋಗ

ಇದಕಾರಂಜುವರೋ ಗೋಪಾಲ?
ಇದಕಾರಂಜುವರೋ, ನಾಳೆ ಬಾಹೋದು

ಎಮಗಿಂದೆ ಬರಲಿ, ಇಂದೆ ಬಾಹೋದು
ನಮಗೀಗಳೆ ಬರಲಿ, ಆಗ ಬಾಹೋದು
ಎಮಗೀಕ್ಷಣ ಬರಲಿ ಯಾತರ ಭಯವು

–ಅಚಲಾನಂದವಿಠಲ

ಇನ್ನೊಂದು ಉದಾಹರಣೆಯನ್ನು ನೋಡಿ:

ವಚನ:

ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ
ಸುರಗಿಯ ಮೊನೆಗಂಜೆ; ಒಂದಕ್ಕಂಜುವೆ,
ಒಂದಕ್ಕಳುಕುವೆ, ಪರಸ್ತ್ರೀ ಪರಧನವೆಂಬೀ
ಜೂಬಿಂಗಂಜುವೆ, ಮುನ್ನಂಜದ ರಾವಣನೇ ವಿಧಿಯಾದ!
ಅಂಜುವೆನಯ್ಯಾ ಕೂಡಲ ಸಂಗಮದೇವ

ಉಗಾಭೋಗ:

ಉರಿಗಂಜೆ, ಸಿರಿಗಂಜೆ
ಶರೀರದ ಭಯಕಂಜೆ
ಪರಧನ ಪರಸತಿ ಗಂಜದ ರಾವಣನೇನಾಗಿ ಪೋದನು
ಮುಂದೆನ್ನ ಸಲಹಯ್ಯ ಪುರಂದರವಿಠಲ

– ಪುರಂದರದಾಸ

ಈ ಮೇಲ್ಕಂಡ ಉದಾಹರಣೆಗಳನ್ನು ಗಮನಿಸಿದಾಗ ಹರಿದಾಸರ ಮೇಲೆ ಶಿವಶರಣರ ವಚನಗಳ ಪ್ರಭಾವ ಗಾಢವಾಗಿಯೇ ಆಗಿದೆ ಎಂಬುದನ್ನು ನೋಡಬಹುದು.

ಭಾವಜೀವಿಯಾದ ಗುರು ಬಸವಣ್ಣನವರಿಗೆ "ನಾದದ ಜೀವಾಳ"ಚೆನ್ನಾಗಿಯೇ ತಿಳಿದಿತ್ತು. ಅದು ಶಿವಸಾಕ್ಷಾತ್ಕಾರಕ್ಕೆ ಪವಿತ್ರ ಸಾಧನವೆಂಬುದನ್ನು ಅವರು ಅರಿತಿದ್ದರು. ತಮ್ಮ ದೇಹವೇ ಒಂದು ವೀಣೆಯಾಗಿ, ಪರಮ ವೈಣಿಕನಾದ ಆ ಶಿವನಿಗೆ ದೊರೆಯಬೇಕೆಂಬ ಹಂಬಲ ಅವರಿಗಿತ್ತು. ಆದ್ದರಿಂದಲೇ ಅವರಿಗೆ ಶಿವನೆಂದರೆ–

ನಾದಪ್ರಿಯ ನಂದಿಯನೇರಿಕೊಂಡು ಅತೀತನ ಮೇಲೆ
ಆನಂದ ಸಿಂಹಾಸನವಿಕ್ಕಿ ಕುಳಿತವನು (ಬ.ಷ.ವ ೯೩೧)

ಎಂಬ ಭಾವವಿತ್ತು. ಚಿತ್ತಸ್ಥೈರ್ಯ ಅಥವಾ ಚಿತ್ತೈಕಾಗ್ರತೆಯನ್ನು ಸಾಧಿಸಲು ಬಸವಣ್ಣನವರು ಜಪಕ್ಕಿಂತಲೂ ಸಂಗೀತಕ್ಕೆ ಹೆಚ್ಚಿನ ಸ್ಥಾನವನ್ನು ಕೊಟ್ಟಿದ್ದಾರೆ.

ಕೋಟ್ಯನುಕೋಟಿ ಜಪವನು ಮಾಡಿ
ಕೋಟಲೆಗೊಳ್ಳಲದೇಕೆ ಮನವೇ?
ಕಿಂಚಿತು ಗೀತವೊಂದನಂತಕೋಟಿ ಜಪ!
ಜಪವೆಂಬುದೇಕೆ ಮನವೇ?
ಕೂಡಲ ಸಂಗನ ಶರಣರ ಕಂಡು
ಆಡಿ ಹಾಡಿ ಬದುಕು ಮನವೇ

ಎಂಬುದೇ ಬಸವಣ್ಣನವರ ನಿಲುವು. ಶಿವಶರಣರು ರಚಿಸಿರುವ ಸ್ವರವಚನಗಳ ಪ್ರಾಮುಖ್ಯತೆಯ ಬಗೆಗೆ ಹಿಂದೆ ನಡೆದ ಘಟನೆಯ ಮೂಲಕ ತಿಳಿಸುತ್ತೇನೆ.

ಈ ಘಟನೆ ನಡೆದದ್ದು ಮೈಸೂರು ಸಂಸ್ಥಾನವನ್ನು ಆಳಿದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ, ದೊರೆಗಳ ಆಸ್ಥಾನದಲ್ಲಿದ್ದ ಸಂಗೀತ ವಿದ್ವಾಂಸರು ಬರೀ ಸಂಸ್ಕೃತ ಮತ್ತು ತೆಲುಗು ಭಾಷೆಗಳ ಕೀರ್ತನೆಗಳನ್ನೇ ಹೆಚ್ಚಾಗಿ ಹಾಡುವುದನ್ನು ಕೇಳಿ ಕೇಳಿ ಮಹಾರಾಜರಿಗೆ ಬೇಸರವಾಗಿತ್ತು! ಒಮ್ಮೆ ಆಸ್ಥಾನ ವಿದ್ವಾಂಸರುಗಳಲ್ಲಿ ಹಿರಿಯರಾದ ಶ್ರೀ ವಾಸುದೇವಾ ಚಾರ್ಯರನ್ನು ಕರೆಸಿ, "ನಿಮ್ಮ ರಚನೆಗಳೆಲ್ಲವೂ ಸಂಸ್ಕೃತ, ತೆಲುಗು ಭಾಷೆಗಳಲ್ಲಿವೆ. ಹುಟ್ಟು ಕನ್ನಡಿಗರಾದ ನೀವು ಕನ್ನಡದಲ್ಲಿ ಕೃತಿರಚನೆ ಮಾಡದಿರಲು ಕಾರಣವೇನು? ಮಾಡಬೇಕಾದ್ದು ನಿಮ್ಮ ಧರ್ಮವಲ್ಲವೆ?" ಎಂದು ಸ್ವಲ್ಪ ನಿಷ್ಠುರವಾಗಿಯೇ ಕೇಳಿದರು! ಅವರು ಕೊಟ್ಟ ಉತ್ತರ ಪ್ರಭುಗಳಿಗೆ ತೃಪ್ತಿ ಕೊಡಲಿಲ್ಲ.

ಈ ಸಂದರ್ಭದಲ್ಲಿ, ತಮಿಳುನಾಡಿನಿಂದ ಬಂದ ವಿದ್ವಾಂಸರೊಬ್ಬರು ಮಹಾರಾಜರ ಭೇಟಿಗಾಗಿ ಕಾಯುತ್ತಿದ್ದರು. ಆದರೆ ಮಹಾರಾಜರ ಭೇಟಿ ಸಿಗುವುದು ಅಷ್ಟು ಸುಲಭವಾಗಿರಲಿಲ್ಲ. ಮಹಾರಾಜರು ಪ್ರತಿನಿತ್ಯವೂ ದೇವಿಯ ದರ್ಶನಕ್ಕಾಗಿ ಚಾಮುಂಡಿ ಬೆಟ್ಟಕ್ಕೆ ಆಗಮಿಸುತ್ತಿದ್ದರು. ಈ ವಿಷಯ ವಿದ್ವಾಂಸರಿಗೆ ಗೊತ್ತಾಗಿ, ಪ್ರಭುಗಳು ಬರುವುದಕ್ಕೆ ಮುಂಚೆಯೇ ಬೆಟ್ಟಕ್ಕೆ ಹೋಗಿ, ದೇವಿಯ ಮುಂದೆ ಹಾಡುತ್ತ ಕುಳಿತರು. ಪ್ರಭುಗಳು ಆಗಮಿಸಿದರು. ಮೌನವಾಗಿ ನಿಂತು, ಆ ವಿದ್ವಾಂಸರು ಹಾಡುವುದನ್ನು ಆಲಿಸಿದರು. ಪ್ರಭುಗಳಿಗೆ ತೃಪ್ತಿಯಾಯಿತು! ಬಳಿಕ ಮಹಾರಾಜರು ಆ ವಿದ್ವಾಂಸರು, "ಕನ್ನಡದಲ್ಲಿ ನೀವು ಕೃತಿರಚನೆ ಮಾಡಬಲ್ಲಿರಾ?"ಎಂದು ಪ್ರಶ್ನಿಸಿದರು. ಆ ವಿದ್ವಾಂಸರು ಸ್ವತಃ ತಮಿಳರಾದರೂ ಸ್ವಲ್ಪವೂ ಹಿಂದೆಗೆಯದೆ, "ಆಗಲಿ ಮಹಾಪ್ರಭು, ರಚಿಸುತ್ತೇನೆ" ಎಂದು ನುಡಿದರು. ಸ್ವಲ್ಪ ಸಮಯ ಪಡೆದು ಕನ್ನಡ ಪಂಡಿತರೊಬ್ಬರನ್ನು ಆಶ್ರಯಿಸಿ, ಅವರಿಂದ ಕನ್ನಡ ಕೀರ್ತನೆಗಳನ್ನು ಬರೆಸಿ, ಸಂಗೀತ ಸಂಯೋಜನೆ ಮಾಡಿದರು. "ಶ್ರೀ ಚಾಮುಂಡೇಶ್ವರಿ ಅಷ್ಟೋತ್ತರ ಕೃತಿಗಳು" ಮತ್ತು "ಶಿವಾಷ್ಟೋತ್ತರ" ಕೃತಿಗಳನ್ನು ರಚಿಸಿ, ಮಹಾರಾಜರ ಸಮ್ಮುಖದಲ್ಲಿ ಹಾಡಿದರು. ಪ್ರಭುಗಳಿಗೆ ಅತ್ಯಾನಂದವಾಯಿತು! ಆ ಗಾಯಕರಿಗೆ "ಗಾಯಕ ಶಿಖಾಮಣಿ" ಎಂಬ ಬಿರುದನ್ನು, ಚಿನ್ನದ ಪದಕವನ್ನೂ ನೀಡಿ, ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ಮಾಡಿ ಗೌರವಿಸಿದರು. ಅವರೇ "ಗಾಯಕ ಶಿಖಾಮಣಿ" ಮುತ್ತಯ್ಯ ಭಾಗವತರು.

ಈ ಪ್ರಸಂಗ ನಡೆದ ಮೇಲೆ ಮಹಾರಾಜರು ಆಸ್ಥಾನ ವಿದ್ವಾಂಸರೆಲ್ಲರನ್ನೂ ಕರೆಸಿ "ಎಲ್ಲರೂ ಕನ್ನಡದಲ್ಲಿ ಸಂಗೀತ ಕೃತಿಗಳನ್ನು ರಚಿಸಬೇಕು" ಎಂದು ಆಜ್ಞಾಪಿಸಿದರು. ನಂತರ ವೀಣೆ ಶೇಷಣ್ಣನವರು, ಬಿಡಾರಂ ಕೃಷ್ಣಪ್ಪನವರು, ವೀಣೆ ಸುಬ್ಬಣ್ಣನವರು, ವೆಂಕಟಗಿರಿಯಪ್ಪನವರು, ನನ್ನ ದೊಡ್ಡಪ್ಪನವರಾದ ಬಿ. ದೇವೇಂದ್ರಪ್ಪನವರು, ಪಿಟೀಲು ಚೌಡಯ್ಯನವರು, ಆರ್.ಎಸ್. ಕೇಶವಮೂರ್ತಿಗಳು ಮತ್ತು ಆರ್.ಎನ್.ದೊರೆಸ್ವಾಮಿಗಳು ಕನ್ನಡದಲ್ಲಿ ಕೃತಿರಚನೆ ಮಾಡಿದರು. ಈ ವಿದ್ವಾಂಸರುಗಳು ರಚಿಸಿದ ಸ್ವರಜತಿ, ವರ್ಣ, ಕೀರ್ತನೆ ಮತ್ತು ತಿಲ್ಲಾನಗಳು ಕ್ರಮೇಣ ಜನಪ್ರಿಯವಾದುವು.

ವಚನ ಸಾಹಿತ್ಯ ಮತ್ತು ಸ್ವರವಚನಗಳು ಹರಿದಾಸರ ರಚನೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಅದರಲ್ಲೂ ಪುರಂದರದಾಸರ ಮೇಲೆ ಮೋಡಿ ಮಾಡಿವೆ! ಎಷ್ಟರಮಟ್ಟಿಗೆ ಅವರು ಪ್ರಭಾವಿತರಾಗಿದ್ದಾರೆ ಎಂದರೆ, ಒಂದು ದೇವರನಾಮದಲ್ಲಿ ತಮ್ಮನ್ನು ಜಂಗಮರು, ಲಿಂಗಾಯತರು ಎಂದು ಹೇಳುವ ಮೂಲಕ ಬಸವಣ್ಣನವರಿಗೆ ಪರೋಕ್ಷವಾಗಿ ತಮ್ಮ ಗೌರವವನ್ನು ಸೂಚಿಸಿದ್ದಾರೆ. ಆ ದೇವರನಾಮ ಹೀಗಿದೆ:

ಜಂಗಮರು ನಾವು ಜಗದೊಳು
ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರು ಭವಿಗಳೆಂತೆಂಬಿರಿ

ಹರಗುರು ದೈವಕೇಶವ ನಮ್ಮ ಮನೆದೈವ
ವರದ ಮೋಹನ ಗುರುಶಾಂತೇಶ
ಹರಗುರು ದ್ರೋಹ ಮಾಡಿದ ಪರವಾದಿಯು
ರೌರವ ನರಕದಿ ಮುಳುಗುವುದೆ ಸಿದ್ಧ

ವಿಭೂತಿ ನಮಗುಂಟು ವಿಶ್ವೇಶ ನಮಗುಂಟು
ಶೋಭನನಾಮ ಮುದ್ರೆಗಳುಂಟು
ಶ್ರೀಭಾಗೀರಥಿಯಗಣಿತ ಮಜ್ಜನವುಂಟು
ಸೌಭಾಗ್ಯವೀವ ಮಹಂತನ ಮಠದವರು ನಾವು

ವಿರಕ್ತರು ನಾವು ಶೀಲವಂತರು ನಾವು
ವೀರಭದ್ರಪ್ರಿಯ ಭಕ್ತರು ನಾವು
ಕಾರಣಕರ್ತ ಶ್ರೀ ಪುರಂದರ ವಿಠಲನ
ಕಾರುಣ್ಯಕೆ ಮುಖ್ಯಪಾತ್ರರು ನಾವು

ಕರ್ನಾಟಕ ಸಂಗೀತದ ಆದ್ಯಪ್ರವರ್ತಕರಾದ ಭಕ್ತಿಭಂಡಾರಿ ಬಸವೇಶ್ವರರನ್ನು, ಈ ಸಮ್ಮೇಳನದಲ್ಲಿಯೇ "ಕರ್ನಾಟಕ ಸಂಗೀತ ಪಿತಾಮಹ" ಎಂಬುದಾಗಿ ಘೋಷಿಸಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಸಭೆಯನ್ನು ಕೋರುತ್ತೇನೆ. ಬಸವೇಶ್ವರರ ಜಯಂತಿ ಸಂದರ್ಭದಲ್ಲಿ "ಶಿವಶರಣರ ಸಂಗೀತೋತ್ಸವ"ವನ್ನು ಏರ್ಪಡಿಸಿ, ಎಲ್ಲ ವಿದ್ವಾಂಸರುಗಳೂ ಶಿವಶರಣರ ಸಂಗೀತಕೃತಿಗಳನ್ನು ಹಾಡುವುದಕ್ಕೆ ಅವಕಾಶ ಕಲ್ಪಿಸಿದರೆ, ಈ ಕನ್ನಡ ರಚನೆಗಳು ಜನಪ್ರಿಯವಾಗುವುದರಲ್ಲಿ ಸಂಶಯವಿಲ್ಲ ಎಂದು ತಿಳಿಸಿದರು.

ಮೈಸೂರಿನಲ್ಲಿ ಆರು ದಿನಗಳ ಕಾಲ ವಿಜೃಂಭಣೆಯಿಂದ ಸಂಗೀತ ಸಮ್ಮೇಳನ ಜರುಗಿತು. ಜೆಎಸ್ಎಸ್ ಸಂಗೀತ ಸಭಾಟ್ರಸ್ಟ್ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಜೊತೆಗೆ ಬೆಳಗಿನ ವಿದ್ವತ್ ಗೋಷ್ಠಿಗಳಲ್ಲಿ ಸಂಗೀತ ವಿದ್ವಾಂಸರು ಮತ್ತು ಶಾಸ್ತ್ರಜ್ಞರುಗಳ ಉಪನ್ಯಾಸ, ವಿಚಾರಗೋಷ್ಠಿ ಹಾಗೂ ಪ್ರಾತ್ಯಕ್ಷಿಕೆಗಳು ನಡೆದವು.

ಶರಣರ ಹಿರಿಮೆ

ಕಾಮಿಸಿದಲ್ಲದೆ ಕೊಡದು ಕಾಮಧೇನು,
ಕಲ್ಪಿಸಿದಲ್ಲದೆ ಕೊಡದು ಕಲ್ಪವೃಕ್ಷ
ಚಿಂತಿಸಿದಲ್ಲದೆ ಕೊಡದು ಚಿಂತಾಮಣಿ
ಭಾವಿಸಿದಲ್ಲದೆ ಕೊಡನು ಶಿವನು,
ಕಾಮಿಸದೆ ಕಲ್ಪಿಸದೆ ಚಿಂತಿಸದೆ ಭಾವಿಸದೆ ಕೊಡಬಲ್ಲರು,
ಕೂಡಲ ಚೆನ್ನಸಂಗಾ ನಿಮ್ಮ ಶರಣರು.

ಇಷ್ಟಲಿಂಗ ದೀಕ್ಷಾ ಸಂಸ್ಕಾರ, ಯಾರು, ಯಾವಾಗ ಮಾಡಿಸಿಕೊಳ್ಳಬೇಕು?

–ಶರಣ. ಸಚ್ಚಿದಾನಂದ ಚಟ್ನಳ್ಳಿ

ನರಜನ್ಮಕ್ಕೊಮ್ಮೆ ಬಂದ ಬಳಿಕ, ಗುರುವಿನ ಕುರುಹ ಕಾಣಬೇಕು.
ಗುರುವಿನ ಕುರುಹ ತಾ ಕಂಡ ಬಳಿಕ, ಶಿಷ್ಯನಾಗಿ ಗುರು ಕರಜಾತನಾಗಬೇಕು.
ಕಪಿಲಸಿದ್ಧಮಲ್ಲಿಕಾರ್ಜುನನ ಪಾದ ಪದ್ಮದಲ್ಲಿ
ಐಕ್ಯವ ಗಳಿಸಬೇಕು ಘಟ್ಟಿವಾಳಯ್ಯಾ.

ಗುರು ಚೆನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆ ಹೊಂದಿದ ಸಿದ್ಧರಾಮೇಶ್ವರರು, ಜ್ಯೋತಿ ಮುಟ್ಟಿ ಜ್ಯೋತಿಯಾದಂತೆ ಗುರು ಮುಟ್ಟಿ ಗುರುವಾಗಿದ್ದಾರೆ. ಇಲ್ಲಿ ಅವರು ಘಟ್ಟಿವಾಳಯ್ಯ ಎನ್ನುವ ಇನ್ನೊಂದು ಜ್ಯೋತಿಯನ್ನು ಬೆಳಗಿಸುತ್ತಾ ಈ ವಚನವನ್ನು ಹೇಳುತ್ತಿದ್ದಾರೆ. ನರಜನ್ಮಕ್ಕೊಮ್ಮೆ ಬಂದ ಬಳಿಕ ಪ್ರತಿಯೊಬ್ಬ ವ್ಯಕ್ತಿಯೂ ಸದ್ಗುರುವಿನ ದರ್ಶನ ಪಡೆಯಬೇಕು, ನಂತರ ಗುರುವಿನ ಕರಜಾತನಾಗಬೇಕು. ಅರ್ಥಾತ್ ಇಷ್ಟಲಿಂಗ ದೀಕ್ಷೆ ಹೊಂದಬೇಕು. ಏಕೆಂದರೆ ''ದೀಕ್ಷೆಯಿಲ್ಲದೆ ಮೋಕ್ಷವಿಲ್ಲ'' ಎನ್ನುವುದು ಶರಣರ ನುಡಿ, ಆದಕ್ಕಾಗಿಯೇ ಕಪಿಲಸಿದ್ಧ ಮಲ್ಲಿಕಾರ್ಜುನ (ಲಿಂಗದೇವನ) ನ ಪಾದದಲ್ಲಿ ಐಕ್ಯವಾಗಲಿಕ್ಕೆ ಇಷ್ಟಲಿಂಗ ದೀಕ್ಷೆಯಿಂದ ಮಾತ್ರ ಸಾಧ್ಯವಿದೆ ಎಂದು ಸಿದ್ಧರಾಮೇಶ್ವರರು ಘಟ್ಟಿವಾಳಯ್ಯನವರಿಗೆ ಉಪದೇಶ ಮಾಡುತ್ತಾರೆ.

ದೀಕ್ಷಾ ಸಂಸ್ಕಾರ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಅತ್ಯಂತ ಪ್ರಮುಖವಾದ ಘಟನೆ. ಅದು ವ್ಯಕ್ತಿಗೆ ಪುನರ್ಜನ್ಮವನ್ನು ಕೊಡುತ್ತದೆ. ಅಲ್ಲಮ ಪ್ರಭುದೇವರು, ಅನುಭಾವ ಮಂಟಪಕ್ಕೆ ಬರುವುದಕ್ಕಿಂತ ಮುಂಚೆ ಅನೇಕ ಸಿದ್ಧಿಗಳನ್ನು ಪಡೆದರೂ ಆದಾವುದೂ ಅವರಿಗೆ ತೃಪ್ತಿ ಕೊಟ್ಟಿರಲಿಲ್ಲ. ಆದರೆ ಇಷ್ಟಲಿಂಗ ದೀಕ್ಷೆ ಪಡೆದ ಮೇಲೆ ''ನಾ ಬಯಸುವ ಬಯಕೆ ಕೈ ಸಾರಿತ್ತಿಂದು'', 'ನಾನು ಬದುಕಿದೆನು' ಎಂದು ಸಂಭ್ರಾಂತಿಯನ್ನು ವ್ಯಕ್ತಪಡಿಸುತ್ತಾರೆ.

ಷಣ್ಮುಖ ಶಿವಯೋಗಿಗಳೂ ಕೂಡ ಇಷ್ಟಲಿಂಗ ದೀಕ್ಷೆ ಹೊಂದಿದ ಬಳಿಕ ಸಂಭ್ರಮಿಸಿದ ರೀತಿ ನೋಡಿದರೆ ಆಚ್ಚರಿಯಾಗುತ್ತದೆ.

ಜಗವನೊಳಕೊಂಡ ಲಿಂಗವು
ಸೊಗಯಿಸಿ ಇಂದೆನ್ನ ಕರಸ್ಥಲಕ್ಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ,
ಗುರು, ಲಿಂಗ, ಜಂಗಮ ಸ್ವರೂಪವಾಗಿ ಮೂರ್ತಿಗೊಂಡಿತ್ತು ನೋಡಾ
ಆಹಾ ಎನ್ನ ಪುಣ್ಯವೆ! ಆಹಾ ಎನ್ನ ಭಾಗ್ಯವೆ! ಆಹಾ ಅಖಂಡೇಶ್ವರ
ನಿಮ್ಮ ಘನವ ಕಂಡು ಎನ್ನ ಮನಕ್ಕೆ ಮಂಗಳವಾಯಿತ್ತು ನೋಡಾ.

ಲಿಂಗಾಯತ ಧರ್ಮದ ಹೆಬ್ಬಾಗಿಲು ಇಷ್ಟಲಿಂಗ ದೀಕ್ಷಾ ಸಂಸ್ಕಾರ. ಯಾವುದೇ ಜಾತಿ ಮತ ಪಂಥದಲ್ಲಿ ಹುಟ್ಟಿದ ವ್ಯಕ್ತಿ ಲಿಂಗಾಯತನಾಗಲಿಕ್ಕೆ ಇರುವ ಏಕೈಕ ಸಾಧನ ಇಷ್ಟಲಿಂಗ ದೀಕ್ಷೆ. ಇಷ್ಟಲಿಂಗ ದೀಕ್ಷೆಯಲ್ಲಿ ಸ್ವತಃ ವ್ಯಕ್ತಿಯೇ ಗುರುವಿನಿಂದ ಇಷ್ಟಲಿಂಗವನ್ನು ಪಡೆದು ಗುರುವಿನ ಹಸ್ತದಲ್ಲಿ ಹುಟ್ಟನ್ನು ಪಡೆದು, ಪುನರ್ಜನ್ಮ ತಾಳುತ್ತಾನೆ.

ವೈದಿಕರಲ್ಲಿ ದೀಕ್ಷಾ ಸಂಸ್ಕಾರವನ್ನು ಉಪನಯನ ಅಥವಾ ದ್ವಿಜ ಸಂಸ್ಕಾರ ಎನ್ನುತ್ತಾರೆ. ದ್ವಿ-ಎಂದರೆ ಎರಡು, ಜ-ಎಂದರೆ ಜನನ ಎಂದು ಅರ್ಥ. ಎರಡನೇ ಸಲ ಜನ್ಮ ತಾಳುವುದೇ ದ್ವಿಜ ಸಂಸ್ಕಾರ.

ಸಿಖ್ ಧರ್ಮದಲ್ಲಿ ಅವರ ಧರ್ಮದ ದೀಕ್ಷೆಗೆ 'ವಾಹುಲ್' ಎಂದು ಕರೆದು ಈ ಸಂಸ್ಕಾರಕ್ಕೆ

ಒಳಗಾದವನು ಮಾತ್ರ ನಿಜವಾದ ಸಿಖ್ ಎನ್ನುವ ನಂಬಿಕೆ ಅವರದು. ಅದೇ ರೀತಿ ಕ್ರಿಶ್ಚಿಯನ್ ಧರ್ಮದಲ್ಲಿ ದೀಕ್ಷಾ ಸಂಸ್ಕಾರಕ್ಕೆ ''ಬ್ಯಾಪ್ಟಿಸಮ್'' (Baptism) ಎಂದು ಕರೆದರೆ, ಇಸ್ಲಾಂ ಧರ್ಮೀಯರು ''ಸುನ್ನತಿ'' ಎಂದು ಕರೆಯುತ್ತಾರೆ. ಈ ರೀತಿ ಎಲ್ಲಾ ಪ್ರವಾದಿ ಧರ್ಮಗಳಲ್ಲಿಯೂ ಆಯಾ ಧರ್ಮಗಳ ದೀಕ್ಷಾ ಸಂಸ್ಕಾರ ವಿಧಿ ವಿಧಾನಗಳಿವೆ ಅದೇ ರೀತಿ ಲಿಂಗಾಯತ ಧರ್ಮದ ದೀಕ್ಷಾ ಸಂಸ್ಕಾರವೇ ''ಇಷ್ಟಲಿಂಗ ದೀಕ್ಷೆ'' ವೈದಿಕ ಧರ್ಮದಲ್ಲಿ 8ನೇ ವಯಸ್ಸಿಗೆ ಗಂಡು ಮಕ್ಕಳಿಗೆ ಉಪನಯನ ಸಂಸ್ಕಾರಕ್ಕೆ ಬಹಳ ಮಹತ್ವ ನೀಡುತ್ತಾರೆ. ಆಹ್ವಾನ ಪತ್ರಿಕೆ ಮುದ್ರಿಸಿ ಬಂಧು ಬಳಗದವರನ್ನೆಲ್ಲಾ ಈ ಕಾರ್ಯಕ್ರಮಕ್ಕೆ ಆಹ್ವಾನಿಸುವರು. ಇದರಿಂದ ಅವರ ಸಹಧರ್ಮೀಯರೂ ಉಪನಯನದ ಮಹತ್ವ ಅರಿತು, ಅವರೂ ಆಚರಿಸುತ್ತಾರೆ. ಲಿಂಗಾಯತ ಧರ್ಮೀಯರಲ್ಲಿಯೂ ಈ ರೀತಿಯ ಜಾಗೃತೆಯುಂಟಾಗುವುದು ಅವಶ್ಯವಾಗಿದೆ. ಈಗೀಗ ಅನೇಕರು ಇಷ್ಟಲಿಂಗ ದೀಕ್ಷೆ ಪಡೆಯುತ್ತಿದ್ದರೂ ಇನ್ನೂ ಹೆಚ್ಚಿನ ಜನರು ಇದರಿಂದ ಬಹುದೂರ ಉಳಿದಿದ್ದಾರೆ. ಅದಕ್ಕಾಗಿ ಆರ್ಥಿಕವಾಗಿ ಅನುಕೂಲವಿರುವವರು, ತಮ್ಮ ಮಕ್ಕಳಿಗೆ ದೀಕ್ಷೆ ಕೊಡಿಸುವಾಗ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಬಂಧು, ಬಾಂಧವರು, ಮಿತ್ರರನ್ನು ಕರೆದು ಗುರುಗಳನ್ನು ಆಹ್ವಾನಿಸಿ, ಮಕ್ಕಳಿಗೆ ದೀಕ್ಷಾ ಸಂಸ್ಕಾರ ಕೊಡಿಸಬೇಕು. ಇದರಿಂದ ಇತರರೂ ದೀಕ್ಷಾ ಸಂಸ್ಕಾರದ ಮಹತ್ವವನ್ನು ಅರಿತುಕೊಳ್ಳುತ್ತಾರೆ. ಆರ್ಥಿಕವಾಗಿ ಅನಾನುಕೂಲವಿರುವವರು ಗುರುಗಳು ಇರುವ ಕಡೆಗೆ ಹೋಗಿ ದೀಕ್ಷೆ ತೆಗೆದುಕೊಳ್ಳಬಹುದು.

ತಾಯಿ - ತಂದೆಯರಿಂದ ಮಾಂಸ ಪಿಂಡವಾಗಿ ಹುಟ್ಟಿದ ಈ ದೇಹ (ಗರ್ಭಲಿಂಗಧಾರಣೆಯಾದರೆ ಮಂತ್ರ ಪಿಂಡವಾಗಿಯೇ ಹುಟ್ಟುತ್ತದೆ) ಸದ್ಗುರುವಿನ ಹಸ್ತದಲ್ಲಿ ಹುಟ್ಟಿದಾಗ ಮಂತ್ರ ಪಿಂಡವಾಗುತ್ತದೆ. ''ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ'' ಎನ್ನುವ ಗುರು ಅಕ್ಕಮಹಾದೇವಿ ತಾಯಿಯವರ ವಚನದಲ್ಲಿ ಈ ಭಾವವೇ ವ್ಯಕ್ತವಾಗಿದೆ.

ವ್ಯಕ್ತಿ, ಲಿಂಗಾಯತರಾದ ತಾಯಿ-ತಂದೆಗಳಿಂದ ಜನ್ಮ ಪಡೆದರೂ, ಧರ್ಮದ ಅನುಯಾಯಿತ್ವ ತನ್ನಿಂದ ತಾನೆ ಬರಲಾರದು. ತಂದೆ ಇಂಜಿನಿಯರ್ ಆದ ಮಾತ್ರಕ್ಕೆ ಅವನ ಮಕ್ಕಳು ಇಂಜಿನಿಯರ್ ಆಗಲಾರರು; ಅವರೂ ಕೂಡ ಡಿಪ್ಲಮೋ, ಬಿ.ಇ. ಪದವಿಧರರಾಗಲೇ ಬೇಕು. ಅದೇ ರೀತಿ ಒಬ್ಬ ಕೂಲಿ ಕಾರ್ಮಿಕನ ಮಗ ಕೂಲಿ ಕಾರ್ಮಿಕನಾಗಲೇ ಬೇಕು ಎಂದೇನಿಲ್ಲ. ಅವನು ಕೂಡ ಡಿಪ್ಲಮೋ, ಬಿ.ಇ. ಪದವಿಗಳನ್ನು ಪಡೆದುಕೊಂಡರೆ ಇಂಜಿನಿಯರ್ ಆಗುತ್ತಾನೆ. ಅದೇ ರೀತಿ ಲಿಂಗಾಯತ ತಾಯಿ - ತಂದೆಯರಿಗೆ ಹುಟ್ಟಿದ ಮಾತ್ರಕ್ಕೆ ಲಿಂಗದೀಕ್ಷೆ ಪಡೆದುಕೊಳ್ಳದೇ ಇರುವವರನ್ನು ಲಿಂಗಾಯತರೆಂದು ಕರೆಯಲಾಗದು. ಅವರು ಕೂಡ ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆಯನ್ನು ಪಡೆಯಲೇ ಬೇಕು. ಅದೇ ರೀತಿ ಯಾವುದೇ ಜಾತಿ, ಮತ, ಅಧಿಕಾರ ಅಂತಸ್ತುಗಳ ಭೇದವಿಲ್ಲದೆ ಯಾರು ಬೇಕಾದರೂ ಇಷ್ಟಲಿಂಗ ದೀಕ್ಷೆ ಹೊಂದಿ ಲಿಂಗಾಯತರಾಗಬಹುದು.

ಕೇವಲ ತಾನು ಇಷ್ಟಲಿಂಗ ದೀಕ್ಷೆ ಸಂಸ್ಕಾರ ಹೊಂದಿ ಲಿಂಗಾಯತನಾದರೆ ಸಾಲದು ಇತರರಿಗೂ ಕೂಡ ಇದರ ಮಹತ್ವವನ್ನು ತಿಳಿ ಹೇಳಿ ಲಿಂಗದೀಕ್ಷೆ ತೆಗೆದುಕೊಳ್ಳುವಂತೆ ಮಾಡಿದರೆ ಜೀವನದಲ್ಲಿ ಒಂದು ಒಳ್ಳೆಯ, ಪುಣ್ಯದ ಕಾರ್ಯ ಮಾಡಿದಂತಾಗುತ್ತದೆ. ಇಷ್ಟಲಿಂಗ ದೀಕ್ಷೆಯ ಮಹತ್ವ ಅರಿತು ಇದನ್ನು ಪಡೆದುಕೊಂಡ ವ್ಯಕ್ತಿಯಂತೂ ನಿಮ್ಮ ಬಗ್ಗೆ ಧನ್ಯತೆಯ ಭಾವ ಹೊಂದುತ್ತಾನೆ. ಆವನೆಂದಿಗೂ ಜನ್ಮದಲ್ಲಿ ನಿಮ್ಮನ್ನು ಮರೆಯದೆ ಕೊಂಡಾಡುತ್ತಲೇ ಇರುತ್ತಾನೆ.

ನರಜನ್ಮವ ತೊಡೆದು ಹರಜನ್ಮ ಮಾಡುವಂಥ, ಭವಿತನವನ್ನು ತೊಡೆದುಹಾಕಿ ಭಕ್ತನನ್ನಾಗಿ ಮಾಡುವಂಥ, ಭವ ಬಂಧನವನ್ನು ತೊಡೆದುಹಾಕಿ ಪರಮ ಸುಖವನ್ನು ತೋರುವಂಥದ್ದು ಈ ಇಷ್ಟಲಿಂಗ ದೀಕ್ಷೆ. ಹಾಗಾದರೆ ಇಂಥ ಇಷ್ಟಲಿಂಗ ದೀಕ್ಷೆ ಸಂಸ್ಕಾರವನ್ನು ವ್ಯಕ್ತಿ ಯಾವಾಗ ತೆಗೆದುಕೊಳ್ಳಬೇಕು? ಮದುವೆಯಾಗುವಾಗಲೋ? ವಯಸ್ಸಾದ ಮೇಲೋ? ಅಥವಾ ಸತ್ತ ಮೇಲೋ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ ಗುರು ಅಕ್ಕಮಹಾದೇವಿ ತಾಯಿಯವರ ಈ

ವಚನ : ಉರಕ್ಕೆ ಜವ್ವನಗಳು ಬಾರದ ಮುನ್ನ,
ಮನಕ್ಕೆ ನಾಚಿಕೆಗಳು ತೋರದ ಮುನ್ನ,
ನಮ್ಮವರಂದೆ ಮದುವೆಯ ಮಾಡಿದರು; ಚೆನ್ನಮಲ್ಲಿಕಾರ್ಜುನಂಗೆ
ಹೆಂಗೂಸೆಂಬ ಭಾವವ ತೋರದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು

ಯೌವ್ವನ ಎನ್ನುವಂಥದ್ದು ಬರುವುದಕ್ಕಿಂತ ಮುಂಚೆಯೇ ದೀಕ್ಷೆಯಾಗಬೇಕು. ಸಾಮಾನ್ಯವಾಗಿ ಹೆಣ್ಣುಮಕ್ಕಳು ದೊಡ್ಡವರಾಗುವುದಕ್ಕಿಂತ ಮುಂಚೆ ಎಲ್ಲರೊಂದಿಗೆ ಬೆರೆತು ಗಂಡು ಹೆಣ್ಣು ಎನ್ನುವ ಭಾವವಿಲ್ಲದೆ, ಲಜ್ಜೆ ನಾಚಿಕೆ ಏನೊಂದು ಇಲ್ಲದೆ ಗಂಡು ಮಕ್ಕಳೊಂದಿಗೆ ಬೆರೆತು ಹೆಣ್ಣು ಮಕ್ಕಳು ಆಟ ಆಡುತ್ತಾರೆ. ಆದರೆ ದೊಡ್ಡವರಾದ ಮೇಲೆ ಅವರಲ್ಲಿ ದೈಹಿಕ ಪರಿವರ್ತನೆಯ ಜೊತೆ ಜೊತೆಗೆ ಮಾನಸಿಕ ಪರಿವರ್ತನೆಯೂ ಕೂಡ ಆಗುತ್ತದೆ. ಆಗ ಮನಕ್ಕೆ ನಾಚಿಕೆಗಳು ಉಂಟಾಗುತ್ತವೆ. ಹೆಂಗೂಸು, ಗಂಡುಗೂಸು ಎನ್ನುವ ಭಾವ ತೋರುವುದಕ್ಕಿಂತ ಮುಂಚೆಯೇ ದೀಕ್ಷೆ ಸಂಸ್ಕಾರವನ್ನು ಪಡೆಯಬೇಕು ಅಥವಾ ಮಕ್ಕಳಿಗೆ ಕೊಡಿಸಬೇಕು ಎನ್ನುವ ಮಹತ್ವಪೂರ್ಣವಾದ ವಿಷಯವನ್ನು ಈ ವಚನ ಹೇಳುತ್ತಿದೆ. ಅಂದರೆ ಹೆಣ್ಣು ಮಕ್ಕಳಿಗೆ ಅವರು ದೊಡ್ಡವರಾಗುವುದಕ್ಕಿಂತ ಮುಂಚೆಯೇ ದೀಕ್ಷೆಯಾಗಬೇಕು. ತೀರ ಚಿಕ್ಕ ವಯಸ್ಸಿನಲ್ಲಾದರೆ ಅವರಿಗೆ ಅಷ್ಟೊಂದು ಅರಿವಿರುವುದಿಲ್ಲ. 8-9 ವರ್ಷಕ್ಕೆಲ್ಲ ಅರಿವು ಎನ್ನುವಂಥದ್ದು ಬರಲು ಆರಂಭಿಸುತ್ತದೆ ಆದಕ್ಕಾಗಿ 10 ವರ್ಷ ವಯಸ್ಸಿನ ಒಳಗೆ ಗಂಡು ಮಗುವೇ ಇರಲಿ ಹೆಣ್ಣು ಮಗುವೇ ಇರಲಿ ದೀಕ್ಷೆ ಮಾಡಿಸಲೇ ಬೇಕು. ಇಲ್ಲಿ ತಾಯಿ-ತಂದೆಗಳ ಜವಾಬ್ದಾರಿ ಬಹಳ ಮುಖ್ಯವಾದುದು. ಮಕ್ಕಳು ಪೂಜೆ ಧ್ಯಾನ ಮಾಡುವುದರಿಂದ ಅವರಲ್ಲಿ ಏಕಾಗ್ರತೆ ಹೆಚ್ಚಾಗಿ ಅವರ ವಿದ್ಯಾಭ್ಯಾಸಕ್ಕೂ ಹೆಚ್ಚು ಉಪಯುಕ್ತವಾಗುತ್ತದೆ. ಮಕ್ಕಳಲ್ಲಿ ಸಹಜವಾಗಿ ಇರುವ ತುಂಟತನಗಳು ಮಾಯವಾಗಿ ಅವರಲ್ಲಿ ಶಾಂತತೆ ಆಳವಡುತ್ತದೆ. ಬಾಲ್ಯದಲ್ಲಿಯೇ ದೀಕ್ಷೆ ಹೊಂದಿ ಪೂಜೆ ಮಾಡುವ ಮಕ್ಕಳು ಇತರ ಮಕ್ಕಳಿಗಿಂತ ಭಿನ್ನವಾಗಿರುತ್ತಾರೆ ಮಾತ್ರವಲ್ಲ ಜ್ಞಾನಿಗಳಾಗಿರುತ್ತಾರೆ.

9-10 ವರ್ಷದ ಮಕ್ಕಳಿಗೆ ದೀಕ್ಷೆ ಕೊಡಿಸುವುದರಲ್ಲಿ ಇನ್ನೊಂದು ಮಹತ್ವಪೂರ್ಣವಾದ ಅಂಶವಿದೆ. ಆ ಎಳೆಯ ಮಕ್ಕಳ ಮನಸ್ಸು ತುಂಬಾ ಶುಭ್ರ ಮತ್ತು ತಿಳಿಯಾಗಿರುತ್ತದೆ. ಅಲ್ಲಿ ಕಾಮ-ಕ್ರೋಧಗಳಿಲ್ಲ, ಮೋಹ-ಲೋಭಗಳಿಲ್ಲ, ಮದ-ಮತ್ಸರ, ರಾಗ-ದ್ವೇಷಗಳು ಇರುವುದಿಲ್ಲ. ಇಂಥ ಪರಿಶುದ್ಧವಾದ ಮನಸ್ಸಿನಿಂದ ಇಷ್ಟಲಿಂಗ ಪೂಜೆ ಮಾಡಿದಾಗ ಪರಮಾತ್ಮನ ಒಲುಮೆಯಾಗುತ್ತದೆ. ಮುಂದೆ ಆ ಮಕ್ಕಳು ಸತ್ಪ್ರಜೆಗಳಾಗಿ, ಲಿಂಗಾಯತ ಧರ್ಮದ, ಭಾರತದೇಶದ, ಮಾನವ ಜನಾಂಗದ ಆಸ್ತಿಯಾಗುತ್ತಾರೆ. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ತಮ್ಮ ಮುಗ್ಧ ಭಕ್ತಿಯಿಂದ ಪರಮಾತ್ಮನನ್ನು ಒಲಿಸಿಕೊಂಡ ಅನೇಕ ಮಕ್ಕಳ ಉದಾಹರಣೆಗಳು ನಮ್ಮೆದುರಿಗೆ ಇವೆ. ಧ್ರುವ, ಕೋಳೂರು ಕೊಡಗೂಸು, ಪ್ರಹ್ಲಾದ, ಸಿಂಡರೆಲಾ, ಚನ್ನಬಸವಣ್ಣ, ಅಕ್ಕಮಹಾದೇವಿ ಇಂಥ ಅನೇಕರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮುಟ್ಟಿರುವುದನ್ನು ಕಾಣುತ್ತೇವೆ. ಆದಕ್ಕಾಗಿ ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ದೀಕ್ಷೆ ಕೊಡಿಸಬೇಕು. ನಮ್ಮ ತಂದೆಯವರು ನನಗೆ 10-12 ವರ್ಷಕ್ಕೆಲ್ಲ ದೀಕ್ಷೆ ಕೊಡಿಸಿದ್ದರು. ಇಷ್ಟಲಿಂಗ ಕೈಯಲ್ಲಿ ಇಟ್ಟುಕೊಂಡು ಪೂಜೆ ಮಾಡುತ್ತಾ ಇದ್ದರೆ ಆಗಲೇ ತುಂಬಾ ಆನಂದವಾಗುತ್ತಿತ್ತು. ಏಕಾಗ್ರತೆ ಒಂದು ಓದಿದ್ದೆಲ್ಲ ಚೆನ್ನಾಗಿ ಅರ್ಥವಾಗುತಿತ್ತು ಮಾತ್ರವಲ್ಲ ನೆನಪಿನಲ್ಲಿ ಉಳಿಯುತ್ತಿತ್ತು ಹೀಗಾಗಿ 5ನೇ ತರಗತಿ ಮುಗಿಯುವಷ್ಟರಲ್ಲೇ ಗುರುಬಸವಣ್ಣನವರ 300 ವಚನಗಳನ್ನು ಕಂಠಪಾಠ ಮಾಡಿದ್ದೆ.

ಇಷ್ಟಲಿಂಗ ದೀಕ್ಷೆಯನ್ನು ಇನ್ನೂ ನೀವು ಪಡೆದುಕೊಂಡಿಲ್ಲವೇ? ನಿಮ್ಮ ಮಕ್ಕಳಿಗೆ ಇನ್ನೂ ದೀಕ್ಷೆ ಮಾಡಿಸಿಲ್ಲವೇ? ಇದಕ್ಕಾಗಿ ತಡವೇಕೆ? ಈಗಲೇ ದೀಕ್ಷೆ ತೆಗೆದುಕೊಳ್ಳುವ ಸಂಕಲ್ಪ ಮಾಡಿ ನಾಳೆಯೇ ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆ ಪಡೆದುಕೊಂಡು ಪಾವನರಾಗಿ.

ಬಸವ ಗಂಗೋತ್ರಿಯಲ್ಲಿ
ನಾಲ್ಕನೆಯ ಬಸವೋತ್ಸವ
ದೇವ(ಭಾನು)ವಾರ, 22-06-2014ರಂದು

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನಲ್ಲಿ 1975ರಲ್ಲಿ ವಿಧ್ಯುಕ್ತವಾಗಿ ಪ್ರಾರಂಭವಾಗಿ, 1977ರಲ್ಲಿ ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಣಿಯಾಯಿತು. ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಅಧ್ಯಕ್ಷರಾಗಿ ಆರಂಭದಿಂದಲೂ ಸಂಸ್ಥೆಯನ್ನು ಮುನ್ನಡೆಸಿದರು. ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೆಯ ಮುಖ್ಯ ರಸ್ತೆಯಲ್ಲಿ ಪ್ರಥಮ ಬಸವ ಮಂಟಪವು ನಿರ್ಮಾಣವಾಗಿ 1975ರ ಬಸವ ಜಯಂತಿಯಂದು ಉದ್ಘಾಟನೆಗೊಂಡಿತು. 1978ರಲ್ಲಿ ವಿಶ್ವಕಲ್ಯಾಣ ಮಿಷನ್ ಟ್ರಸ್ಟ್ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬೆಂಗಳೂರು -ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು ''ಬಸವ ಗಂಗೋತ್ರಿ ಆಶ್ರಮ'' ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತದೆ. ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಡೆಸುತ್ತಲಿದೆ.

ಬಸವ ಗಂಗೋತ್ರಿಯಲ್ಲಿ ಬಸವಾಲಯವೊಂದನ್ನು ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಲಿಂ|| ಶರಣ. ಜಿ.ಎನ್. ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ-ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಬಸವ ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

ಬಸವ ಗಂಗೋತ್ರಿಯಲ್ಲಿ ಆಗಾಗ ಬಸವ ತತ್ವ ತರಬೇತಿ ಶಿಬಿರವನ್ನು, ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆಯಾದರೂ 2010ನೇ ಇಸ್ವಿಯಿಂದ ವಾರ್ಷಿಕ ಉತ್ಸವವನ್ನಾಗಿ ಬಸವೋತ್ಸವವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ ದಿ.22-06-2014ರಂದು ನಾಲ್ಕನೆಯ ಬಸವೋತ್ಸವವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ಕ್ಕೆ ಉದ್ಘಾಟನೆ. ದಿ.09.05.2010ರಂದು ಜಗದ್ಗುರು ಶ್ರೀ ಚನ್ನಬಸವೇಶ್ವರ ಜ್ಞಾನ ಪೀಠ ಸ್ಥಾಪನೆಗೊಂಡಿದ್ದು ಪೂಜಾ ನಿಷ್ಠರು, ಬಹುಭಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ಮತ್ತು ಗೌರವಾರ್ಪಣೆ; ನಂತರ ಸಮಾರೋಪ.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223, 224, 226 ರೂಟ್ ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕೆಯ ಮೇರೆಗೆ ನಿಲ್ಲುತ್ತವೆ. ಬಸವ ಗಂಗೋತ್ರಿ ಪ್ರವೇಶ ದ್ವಾರವು ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಮಧ್ಯದಲ್ಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ
ಬೆಂಗಳೂರು -ಮೈಸೂರು ಹೆದ್ದಾರಿ
ಕುಂಬಳಗೋಡು -560074
ಬೆಂಗಳೂರು ದಕ್ಷಿಣ ತಾಲ್ಲೋಕು
ಮೊ: 9448386717

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್
ನಂ. 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು -560010
ಮೊ: 9663385657

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ
ಅನಾಥಾಲಯಗಳಿಗೆ ಪ್ರವೇಶಾವಕಾಶ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯ.
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
9845399698 / 9448386717
ಬಾಲಕರಿಗೆ 7ನೆಯ ತರಗತಿಯವರೆಗೆ ಮಾತ್ರ,
ಬಾಲಕಿಯರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ.

2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಅನಾಥಾಲಯ
ಸಂಪರ್ಕಿಸಬೇಕಾದವರು : ಶರಣೆ. ನೀಲಾಂಬಿಕಾ ಇಂಗಳಳ್ಳಿ, 9886667244
ಬಾಲಕರಿಗೆ ಒಂದರಿಂದ ಏಳು
ಬಾಲಕಿಯರಿಗೆ ಒಂದರಿಂದ ಹತ್ತನೆ ತರಗತಿಯವರೆಗೆ.

3. ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ.
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
9341819847
ಬಾಲಕರಿಗೆ ಮಾತ್ರ ; ಒಂದರಿಂದ ಹತ್ತನೆ ತರಗತಿಯವರೆಗೆ.

4. ಬಸವ ಕಲ್ಯಾಣದಲ್ಲಿ ಅಕ್ಕನಾಗಲಾಂಬಿಕಾ ಅನಾಥಾಲಯ
ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು
9480497346,
ಬಾಲಕ-ಬಾಲಕಿಯರಿಬ್ಬರಿಗೂ ಒಂದನೆಯ ತರಗತಿಯಿಂದ 10ನೆಯ ತರಗತಿಯವರೆಗೆ ಪ್ರವೇಶಾವಕಾಶ.

5. ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ, ಬಾಲಕಿಯರಿಗೆ ಮಾತ್ರ
ಸಂಪರ್ಕಿಸಬೇಕಾದವರು : ಶರಣೆ. ಶಾಂತಾ ಬಿರಾದಾರ್ – 9591637102,
9480497346,

6. ಕಲ್ಯಾಣಮ್ಮ (ಅನಾಥಾಲಯ) ನಿರ್ಗತಿಕ ಮಕ್ಕಳ ಕುಟೀರ. ಬೀದರ ಬಸವ ಮಂಟಪ.
ಕೇವಲ ಬಾಲಕಿಯರು. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ,
ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : 9480497346,

7. ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬೀದರ ಬಸವ ಮಂಟಪದಲ್ಲಿ 5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ.
ಶರಣ. ಬಸವಕುಮಾರ್ ಚಟ್ನಳ್ಳಿ, ಶಿಕ್ಷಕರು – 9741675365, 9900210456

8. ಅಕ್ಕನಾಗಲಾಂಬಿಕಾ ನಿರ್ಗತಿಕ ಮಕ್ಕಳ ಕುಟೀರ
ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ
ಬಸವ ಕಲ್ಯಾಣ, ಬೀದರ್ ಜಿಲ್ಲೆ
ಶರಣೆ. ಶಾಂತಾ ಬಿರಾದಾರ್, ಹಾರೂರಗೇರಿ, ಬೀದರ್– 9591637102,



ದಿ.11–5–2014ರಂದು ಹಳೇಬೀಡಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರಿಗೆ ಶರಣ–ಶರಣೆಯರಿಂದ ಸತ್ಕಾರ



ದಿ.11–5–2014ರಂದು ಹಳೇಬೀಡಿನಲ್ಲಿ ನಡೆದ ವಿಶ್ವಧರ್ಮ ಪ್ರವಚನದ ಮುಕ್ತಾಯ ಸಮಾರಂಭ



ಅಮೇರಿಕಾದಲ್ಲಿ ನಡೆದ 2014ರ ಬಸವ ಜಯಂತಿ ಕಾರ್ಯಕ್ರಮದಲ್ಲಿ ಗದುಗಿನ ರಾಷ್ಟ್ರೀಯ ಬಸವ ದಳದ



ಬೆಂಗಳೂರಿನ ರಾಜಾಜಿನಗರದ 2ನೇ ಬ್ಲಾಕ್‌ನ 20ನೇ ಮುಖ್ಯ ರಸ್ತೆಗೆ "ಬಸವ ಮಂಟಪ ರಸ್ತೆ" ಎಂದು ನಾಮಕರಣ ದಿ.02–5–2014ರಂದು ಮಾಡಲಾಯಿತು, ಪೂಜ್ಯ ಮಾತಾಜಿ, ರಾಜಾಜಿನಗರದ ಶಾಸಕ ಎಸ್. ಸುರೇಶ್‌ಕುಮಾರ, ಬಿಬಿಎಂಪಿ ಸದಸ್ಯ ಹೆಚ್. ಆರ್. ಕೃಷ್ಣಪ್ಪನವರು ಉಪಸ್ಥಿತರಿದ್ದರು ಮತ್ತು ಅವರಿಗೆ ಪೂಜ್ಯ ಡಾ॥ ಮಾತಾಜಿಯವರಿಂದ ಸತ್ಕಾರ









Registared No. KA/BGW/20/2012-2014, RNI 19980/70, POSTED AT MBC BANGALORE GPO
On 3rd, 10th, 20th of Every month. Licenced to Post without pre payment WPP-17,
Pages 32+4(Cover pages)